ಶ್ರೀ ಆರ್.ವಿ.ದೇಶಪಾಂಡೆ : ಅಂತಹವರ ಜೊತೆಯಲ್ಲಿದ್ದ ಫೋಟೋವನ್ನು ನಾನು ತೋರಿಸುತ್ತೇನೆ. ಮಾನ್ಯ ಶರದ್‌ಪವಾರ್‌ರವರು ಕೇಂದ್ರದಲ್ಲಿ ರಕ್ಷಣಾ ಸಚಿವರಾಗಿದ್ದಾಗ ಲಕ್ನೋದಿಂದ ಬಾಂಬೆಗೆ ಬರುವಾಗ ಸ್ಪೆಷಲ್ ಏರ್‌ಕ್ರಾಫ್ಟ್‌ನಲ್ಲಿ ಕೆಲವು antisocial ಜನ ಇದ್ದರು ಅಂದಾಗ ಅವರು, he admitted....

SRI M. Veerappa Moily : I don't think it can go on record.

SRI Harnalli Ramaswamy: It should not go into the record.

SRI K.H. Ranganath : It should not be raised here.

ಶ್ರೀ ಆರ್.ವಿ. ದೇಶಪಾಂಡೆ : ಲೋಪವಿದೆಯೆಂದು ಹೇಳುವಾಗ, ಹೌದು ನನಗೆ ಗೊತ್ತಾಗಲಿಲ್ಲ ಯಾರೋ ನನ್ನ ಸ್ನೇಹಿತರು ಮತ್ತು ಅವರು ಕುಳಿತುಕೊಂಡು ಬಂದರು ಅಂದರು. ನಾನು ಅವರ ಪರವಾಗಿ ಮಾತನಾಡುತ್ತಿದ್ದೇನೆ, ಅವರು ತಪ್ಪು ತಿಳಿದುಕೊಂಡಿದ್ದಾರೆ. When it was brought to his notice, he admitted and he said, I am sorry. ಶರತ್ ಪವಾರ್‌ರವರು ನನಗೆ ಗೊತ್ತಾಗಲಿಲ್ಲವೆಂದು ಹೇಳಿದರು. ರಕ್ಷಣಾ ಸಚಿವರು ಒಪ್ಪಿಕೊಂಡರು ನಿಜ ಕೆಲವು ಸಂದರ್ಭಗಳಲ್ಲಿ ಬರುತ್ತಾರೆ, ಸ್ನೇಹಿತರ ಜೊತೆಯಲ್ಲಿ ಬಂದರು ಎಂದು ಅವರು ಒಪ್ಪಿಕೊಂಡಿದ್ದಾರೆ. ಯಾರು ಅಧಿಕಾರದಲ್ಲಿರುತ್ತಾರೆ ಯಾರು ಸ್ಥಾನಮಾನ ಪಡೆದುಕೊಂಡಿದ್ದಾರೆ ಅವರ ಮೇಲೆ ಜವಾಬ್ದಾರಿಗಳು ಇರುತ್ತವೆ. ನಾನು ಅವರ ವಿರುದ್ಧ ಮಾತನಾಡುತ್ತಿಲ್ಲ. ಈಗಾಗಲೇ ನಾವು ಮತ್ತು ನಮ್ಮ ಪಕ್ಷದ ಸದಸ್ಯರು ಬೇರೆ ಪಕ್ಷದವರು .....

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಇದು ಅಜೆಂಡಾ ಪ್ರಕಾರ ಇದೆಯೆ?

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ

ವಿಷಯ : ಸೋಮಕ್ಕನ ಹಳ್ಳಿಯಲ್ಲಿ ಜನತಾದಳದ ಕಾರ್ಯಕರ್ತನ ಕೊಲೆ.

* ಶ್ರೀ ಆರ್.ವಿ. ದೇಶಪಾಂಡೆ : ನಾನು ಈ ವಿಚಾರವನ್ನು ರೈಸ್ ಮಾಡಿದಾಗ ಹೋಮ್ ಮಿನಿಷ್ಟರ್‌ರವರನ್ನು ಕರೆಯುವುದಕ್ಕೆ ಅಧ್ಯಕ್ಷರು ಕಳುಹಿಸಿದ್ದಾರೆ. ನಿಯಮ 351ರ ಪ್ರಕಾರ ತಮ್ಮ ಕಛೇರಿಗೆ ಒಂದು ನೋಟೀಸ್ ಕಳುಹಿಸಿದ್ದೇನೆ. ಅದರ ಪ್ರತಿಯನ್ನು ಗೃಹಸಚಿವರ ಕಛೇರಿಗೂ ಕಳುಹಿಸಿದ್ದೇನೆ. ದಿನಾಂಕ 11-6-94ರಂದು ಸೋಮಕ್ಕನಹಳ್ಳಿ ಗ್ರಾಮದಲ್ಲಿ ನಮ್ಮ ಜನತಾದಳದ ಒಬ್ಬ ಕಾರ್ಯಕರ್ತರ ಕೊಲೆಯಾಯಿತು ಆ ಸಮಯದಲ್ಲಿ ಕೊಲೆ ಆದಾಗ ಸಿಪಿಐದವರು ಒಂದು ಸ್ಟೇಟ್‌ಮೆಂಟ್ ಮತ್ತು ರೆಕಾರ್ಡ್ ಮಾಡುವುದಕ್ಕೆ ಹೋದಾಗ ಬಹಳ ದೊಡ್ಡ ಗಲಾಟೆಯಾಗಿ ರಾಮರೆಡ್ಡಿಯವರ ದೇಹವನ್ನು ಪೋಸ್ಟ್‌ಮಾರ್ಟಮ್

ಮಾಡುವುದಕ್ಕೆ ಮತ್ತೊಂದು ಹಳ್ಳಿಗೆ ತೆಗೆದುಕೊಂಡು ಹೋಗಿದ್ದರು. ಅಲ್ಲಿ ಸಿಪಿಐನವರು ನಿಷ್ಪಕ್ಷಪಾತವಾಗಿ ಕೆಲಸ ಮಾಡುತ್ತಿಲ್ಲವೆಂದು ಇಡೀ ಗ್ರಾಮದ ಜನ ಗಲಾಟೆ ಮಾಡಿದಾಗ ಎಸ್‌ಪಿಯವರು ಇನ್‌ವೆಸ್ಟಿಗೇಷನ್ ಚೇಂಜ್ ಮಾಡಿ ಡಿವೈಎಸ್‌ಪಿಯವರಿಗೆ ಕೊಟ್ಟರು. ಈ ಕೇಸಿನಲ್ಲಿ ಒಟ್ಟು 21ಜನ ಆರೋಪಿಗಳು ಇದ್ದಾರೆ. ಅದರ ಕ್ರೈಮ್ ಬಂ. 81-94, 302 ಐಸಿಪಿ ಕೆಳಕೆ ಕೇಸು ದಾಖಲಾಗಿದೆ. ಅದರಲ್ಲಿ 9 ಜನ ಆರೋಪಿಗಳಿಗೆ ಪೋಲಿಸರು ಅರೆಸ್ಟ್ ಮಾಡಿದರು. 12 ಜನ ಅಬ್‌ಸ್ಕಾಂಡ್ ಆಗಿದ್ದರು ಅದರಲ್ಲಿ ಅಕ್ಯುಸ್ ನಂ. 1 ಮತ್ತು 5 ಅವರು ಅನಂತರ ದಿನಾಂಕ 28-7-94ರಂದು ಕೋರ್ಟ್ ಮುಂದೆ ಹಾಜರಾಗಿ ಆಂಟಿಸಿಪೇಟರಿ ಬೇಲ್ ತೆಗೆದುಕೊಂಡರು. ಅಕ್ಯುಸ್ ನಂ. 1 ಅವರ ಹೆಸರು ಭೈರಾರೆಡ್ಡಿ ಅಕ್ಯುಸ್ ನಂ. 5 ಹೆಸರು ಚಿಕ್ಕನಾರಾಯಣಸ್ವಾಮಿ. ಒಂದು ಕಡೆ ಕೊಲೆಯಾಗುತ್ತದೆ. ಆರೋಪಿಗಳ ವಿರುದ್ಧ ಸರ್ಕಾರ ಕ್ರಮ ತೆಗೆದುಕೊಳ್ಳದೆ ಸಿಪಿಐನವರು ಇನ್‌ವೆಸ್ಟಿಗೇಷನ್ ಸರಿಯಾಗಿ ಮಾಡಿಲ್ಲ ಎಂದಾಗ ಇನ್‌ವೆಸ್ಟಿಗೇಷನ್ ಚೇಂಜ್ ಮಾಡಿದ್ದಾರೆ. ಕೆಲವು ಆರೋಪಿಗಳು ಬೇಲ್ ಮೇಲೆ ಹೊರಗೆ ಬಂದಿದ್ದಾರೆ. ಕೆಲವು ಆರೋಪಿಗಳು ಅಬ್‌ಸ್ಕಾಂಡ್ ಆಗಿ ಬೇಲ್ ತೆಗೆದುಕೊಂಡಿದ್ದಾರೆ. ಇಂತಹ ಒಂದು ಸ್ಟೇಜ್‌ನಲ್ಲಿ ರಾಜ್ಯದ ಗೃಹಸಚಿವರು ಆರೋಪಿಗಳ ಜೊತೆಯಲ್ಲಿ ಯಾಹ ಪ್ರಕಾರ ಸಂಬಂಧವಿರಬೇಕು ಅದರ ಬಗ್ಗೆ ನಿರ್ಣಯವಾಗಬೇಕಾಗಿದೆ. ನಾವು ಮಂತ್ರಿಗಳಾಗುವಾಗ ಈ ನಾಡಿನ, ಈ ದೇಶದ ಕಾಯಿದೆ ಕಾನೂನುಗಳಿಗೆ ಗೌರವ ಕೊಡುತ್ತೇವೆಂದು ಪ್ರಮಾಣ ವಚನ ಸ್ವೀಕಾರ ಮಾಡಿ ಈ ದೇಶದ, ನಾಡಿನ ಕಾಯಿದೆ ಕಾನೂನುಗಳಿಗೆ ಗೌರವ ಕೊಡುತ್ತೇವೆಂದು ಹೇಳಿ ಅದು ಉಲ್ಲಂಘನೆಯಾಗುವುದಿಲ್ಲವೆಂದು ಹೇಳಿದ್ದಾರೆ. ಆದರೆ, ರಾಜ್ಯದ ಒಬ್ಬ ಗೃಹಸಚಿವ, ಇನ್‌ವೆಸ್ಟಿಗೇಷನ್ ನಡೆದಾಗ ಆರೋಪಿ ಜೊತೆ ಪ್ರೊಸೆಷನ್ ಮಾಡಿದರೆ, ಏನು ಪರಿಣಾಮವಾಗಬಹುದು? ಇದನ್ನು ನಾವು ವಿಚಾರ ಮಾಡಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಯವರು ಒಂದು ಮಾತು ಹೇಳಿದರು. ಎಲ್ಲರ ಫೋಟೋವನ್ನು ತೆಗೆಯಬೇಕಾಗುತ್ತದೆ ಎಂದು ನಿಜ, ಮಾನ್ಯ ಮುಖ್ಯಮಂತ್ರಿಯವರು ಒಂದು ಪವಿತ್ರವಾದ ಸ್ಥಾನದಲ್ಲಿದ್ದಾರೆ, ಗೌರವ ಸ್ಥಾನದಲ್ಲಿದ್ದಾರೆ. ಹಾಗಾಗಿ ಎಕ್ಸ್‌ಟ್ರಾ ಕೇರ್ ತೆಗೆದುಕೊಳ್ಳಬೇಕಾಗುತ್ತದೆ. One has to be extra careful. ನಾನು ಅವತ್ತು ಪ್ರವಾಸದಲ್ಲಿದ್ದಾಗ, ಒಪ್ಪಿಕೊಳ್ಳುತ್ತೇನೆ. ಎಷ್ಟೋ accused ವಿಚಾರ ಬರಬಹುದು, ಮಾತನಾಡಬಹುದು. ಅವರಿಗೆ ನನ್ನ association ಏನಿರಬೇಕು, ಸಮನ್ವಯ ಏನಿರಬೇಕು, ಇದರ ಬಗ್ಗೆ ಕೇರ್ ಫುಲ್ ಆಗಿ ಇರಬೇಕಾಗುತ್ತದೆ. ಇಲ್ಲವೆಂದರೆ, I am bound by the law of the land ಮಾನ್ಯ ಸಚಿವರು, ಅವರದೇ ಜಿಲ್ಲೆಯಲ್ಲಿ, ಅವರದೇ ಕ್ಷೇತ್ರದಲ್ಲಿರುವ ಸೋಮಕ್ಕನಹಳ್ಳಿಯಲ್ಲಿ 8-7-94ಕ್ಕೆ ಈ ಆರೋಪಿಗಳು ಏನು ಬಿಡುಗಡೆಯಾದರಲ್ಲ ಅದರ ಬಗ್ಗೆ 13-8-94ಕ್ಕೆ ವಿಜಯೋತ್ಸವನ್ನು ಆಚರಿಸುತ್ತಿದ್ದಾರೆ. 13-8-94ಕ್ಕೆ ಹುಬ್ಬಳ್ಳಿಯಲ್ಲಿ ಬೆಂಕಿ ಹತ್ತಿದೆ, ಅಲ್ಲಿ ಗಲಾಟೆಯಾಗಿದೆ. ಮಾನ್ಯಮಂತ್ರಿಗಳು ಇಲ್ಲಿ ಪ್ರೊಸೆಷನ್ ಮಾಡುತ್ತಿದ್ದಾರೆ. ಎಷ್ಟು ಸೀರಿಯಸ್‌ನೆಸ್ ಹುಬ್ಬಳ್ಳಿಯ ಘಟನೆ ವಿಚಾರದಲ್ಲಿ ಮಾನ್ಯ ಹೋಮ್ ಮಿನಿಸ್ಟರುಗಳು ಇಲ್ಲದೇ ಇರುವುದನ್ನು ತಮ್ಮ

ಗಮನಕ್ಕೆ ತರುತ್ತಿದ್ದೇನೆ. ಮೊನ್ನೆ ಮಾನ್ಯಮುಖ್ಯಮಂತ್ರಿಗಳು ಇಲ್ಲಿ ಹೇಳಿದರು. When Rome was burning Neuro was fiddling.

ಹಾಗೆ ಹುಬ್ಬಳ್ಳಿಯಲ್ಲಿ ಬೆಂಕಿ ಹತ್ತಿದ್ದರೆ, ನಮ್ಮ ಬಿ.ಜೆ.ಪಿ. ಸ್ನೇಹಿತರು ಅಲ್ಲಿ ಬೆಂಕಿ ಹಚ್ಚಿದರು, ಆರ್.ಎಸ್.ಎಸ್. ಮತ್ತು ಬಿ.ಜೆ.ಪಿ. ಕೂಡಿ ಹಚ್ಚಿದರು. ಆ ಟೈಮ್‌ನಲ್ಲಿ ನಮ್ಮ ಹೋಮ್ ಮಿನಿಸ್ಟರು ಅದರ ಬಗ್ಗೆ ಗಮನ ಕೊಡಬೇಕಾಗಿತ್ತು. ಅದರ ಬಗ್ಗೆ ಗಮನ ಕೊಡದೇ, ಇಲ್ಲಿ ಪ್ರೊಸೆಷನ್ ಮಾಡುತ್ತಿದ್ದಾರೆ. ಆ ಸಮಯದಲ್ಲಿ ಒಂದು ಶಾಲೆಯಲ್ಲಿ ಸಮಾರಂಭ ಇಟ್ಟುಕೊಂಡಿದ್ದರು. ಆ ಸಮಾರಂಭದಲ್ಲಿ ಎಲ್ಲಾ ಅಧಿಕಾರಿಗಳೂ ಇದ್ದಾರೆ, ಪೋಲಿಸ್ ಅಧಿಕಾರಿಗಳು ಇದ್ದಾರೆ , ನಾನು ಕೇಳುತ್ತಿದ್ದೇನೆ, ಇವತ್ತು ರಾಜ್ಯದ ಗೃಹಸಚಿವರು, ಆರೋಪಿ ಜೊತೆ ಪ್ರವಾಸ ಮಾಡಲಿಕ್ಕೆ, ಶುರು ಮಾಡಿದರೆ, ಆರೋಪಿ ಜೊತೆ ಪ್ರೊಸೆಷನ್ ಮಾಡಿದರೆ, ಯಾವ ಮಟ್ಟಕ್ಕೆ ತಮ್ಮ ಲಾ ಅಂಡ್ ಆರ್ಡರ್ ಹೋಗಿದೆ . ಮಾನ್ಯ ಗೃಹಸಚಿವರು ಪೋಲಿಸ್ ಇಲಾಖೆಯಲ್ಲಿ ಏನು ಹತೋಟಿ ಇಡುವುದಕ್ಕೆ ಸಾಧ್ಯವಾಗಬಹುದು. ಇದನ್ನು ನಾವು ವಿಚಾರ ಮಾಡಬೇಕಾಗುತ್ತದೆ ಹಾಗಾಗಿ ಇವತ್ತು ಗೃಹಸಚಿವರು , Morally and legally, you have forfeited your right to continue as Home Minister of this State. ಕೇಸ್‌ನಲ್ಲಿ ಇನ್‌ವೆಸ್ಟಿಗೇಷನ್ ಏನಾಗಬಹುದೆಂಬುದನ್ನು ತಾವೇ ಹೇಳಿ. ನಮ್ಮ ಬಗ್ಗೆ ನನಗೆ ಅಭಿಮಾನ ಇರಬಹುದು, ಪರ್ಸ್‌ನಲ್ ರಿಗಾರ್ಡ್ ಇರಬಹುದು, ಆದರೆ, ನಾನು ಇಲ್ಲಿ ಪ್ರಶ್ನೆ ಕೇಳುತ್ತೇನೆ, ತಾವೇ ಹೇಳಿ, ಇವತ್ತು ಇನ್‌ವೆಸ್ಟಿಗೇಷನ್ ನಡೆಯುವಾಗ, ಈ ರೀತಿಯಾದರೆ, ಯಾವ ತರಹ ಇನ್‌ವೆಸ್ಟಿಗೇಷನ್ ಪೋಲೀಸ್‌ನವರು ಮಾಡುವುದಕ್ಕೆ ಸಾಧ್ಯವಿದೆ? ಇದೇ ಕೇಸ್‌ನಲ್ಲಿ ಯಾರು ಆರೋಪಿ ಇದ್ದಾರೆ, ಅವರು ಉದ್ದೇಶಪೂರ್ವಕವಾಗಿ, ಮರ್ಡರ್ ಆದನಂತರ, 48 ತಾಸಿನಲ್ಲಿ ಒಂದು ಕೇಸನ್ನು ನಮ್ಮ ಕಾರ್ಯಕರ್ತರು ಫೈಲ್ ಮಾಡಿದ್ದಾರೆ, under Section 307 ಯಾವ ಬೇಲ್ ಅಪ್ಲಿಕೇಷನ್ ಮೂವ್ ಆಯಿತು, ಯಾರು 21 ಜನ ಬೇಲ್ ಅಪ್ಲಿಕೇಷನ್ ಕೊಟ್ಟರು. ಆಗ ಅವರ ಗ್ರೌಂಡ್ ಏನು? Defence ಸಲುವಾಗಿ ಮರ್ಡರ್ ಮಾಡಿದ್ದೇವೆ, ನಮ್ಮ ಪ್ರೊಟೆಕ್ಷನ್ ಸಲುವಾಗಿ ನಾವು ಫೈರ್ ಮಾಡಿದ್ದೇವೆ, 307 ಕೇಸ್ Have you prosecuted them? ಸರ್ಕಾರಿ prosecutor ಹೇಳಿದ್ದಾರೆ, ಇಲ್ಲ. 307 ಕೇಸ್ ಫಾಲ್ಸ್‌ಕೇಸ್ ಇದೆ. ಹಾಗಾಗಿ ಬೇಲ್ ಕೊಡಬಾರದೆಂದು ವಿರೋಧ ಮಾಡಿದರು. ಆದರೂ ಸಹ ಇವರ ಪ್ರಭಾವದಿಂದ, ಇವತ್ತು ಬಿಡುಗಡೆಯಾಗಿ ಬಂದಿದ್ದಾರೆ. ತಮಗೆ ಅವರ ಫೋಟೋ ತೋರಿಸುತ್ತಿದ್ದೇನೆ. ಇದು ಮಾನ್ಯ ಸಚಿವರ ಫೋಟೋ. Accused Number one, Accused Number Five ಎರಡೂ ಕಡೆ ಹಾರ ಹಾಕಿಕೊಂಡು ಪ್ರೊಸೆಷನ್ ಮಾಡುತ್ತಿದ್ದಾರೆ. ತಮ್ಮ ಮುಖಾಂತರ ಇದನ್ನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರುತ್ತಿದ್ದೇನೆ. ಇವತ್ತು ಮಾನ್ಯಮುಖ್ಯಮಂತ್ರಿಯವರು ಕಾನೂನಿನ ಬಗ್ಗೆ, ಕಾನೂನು ಸುವ್ಯವಸ್ಥೆ ಬಗ್ಗೆ, ಒಳ್ಳೆಯ ಸರ್ಕಾರ ಕೊಡುವ ಬಗ್ಗೆ, ಆವೇಶದಿಂದ ಮಾತನಾಡುವಾಗ, ಇದರ ಬಗ್ಗೆಯೂ

ಮಾನ್ಯಮುಖ್ಯಮಂತ್ರಿಗಳು ಉತ್ತರ ಕೊಡಬೇಕಾಗುತ್ತದೆ. ತಮ್ಮದೇ ಸಚಿವರು, ಅದರಲ್ಲೂ ಗೃಹಸಚಿವರು. ಇನ್‌ವೆಸ್ಟಿಗೇಷನ್ ನಡೆಯುತ್ತಾ ಇದೆ, ಅಂತಹ ಸಮಯದಲ್ಲಿ ಯಾರು ಆರೋಪಿ ಇದ್ದಾರೆ. ಅವರ ಜೊತೆ ಈ ಪ್ರಕಾರ ಪ್ರೊಸೆಷನ್‌ಗೆ ಹೋಗಿ ಹಾರ ಹಾಕಿಕೊಂಡು, ವಿಜಯೋತ್ಸವ ಮಾಡಿದರೆ, ರಾಜ್ಯದ ಜನತೆಗೆ ತಾವು ಯಾವ ಮಟ್ಟದ ಸಂರಕ್ಷಣೆ ಮಾಡುವುದಕ್ಕೆ ಸಾಧ್ಯವಿದೆ? ಇದರ ಬಗ್ಗೆ ತಾವು ಹೇಳಬೇಕಾಗುತ್ತದೆ. ಇವತ್ತು ಹಲವಾರು ವಿಚಾರಗಳು ಪತ್ರಿಕೆಗಳಲ್ಲೂ ಬಂದಿವೆ, ಇವತ್ತು ಚಿಂತಾಮಣಿಯಲ್ಲಿ ಅವರ ಥಿಯೇಟರ್ ವಿಚಾರದಲ್ಲಿ ಅವರು ಡಿನ್ನೆ ಮಾಡಿದ್ದಾರೆ. ನಾನು ಒಪ್ಪಿಕೊಳ್ಳುತ್ತೇನೆ. ಲೋಕಾಯುಕ್ತದವರು ನೋಟೀಸ್ ಕೊಟ್ಟಿಲ್ಲ. ಆದರೆ, ಲೋಕಾಯುಕ್ತದವರು ವಿವರಣೆ ಕೇಳಿದ್ದಾರೆ. ಒಂದು ಪಟ್ಟಣ ಪ್ರದೇಶದಲ್ಲಿ ಇದ್ದ ಜಾಗ, ಅದೂ ಅರ್ಬನ್ ಏರಿಯಾ ಜಾಗದಲ್ಲಿ ಇದ್ದುದನ್ನು ಗ್ರಾಮಾಂತಪ್ರದೇಶದ್ದು ಎಂದು ಹೇಳಿ ಪ್ರತಿ ತಿಂಗಳು ಸರ್ಕಾರಕ್ಕೆ ಒಂದೂವರೆಯಿಂದ ಎರಡು ಲಕ್ಷ ರೂಪಾಯಿ ಟ್ಯಾಕ್ಸ್ ತಪ್ಪಿಸುತ್ತಿದ್ದಾರೆ. ಜಿಲ್ಲಾಧಿಕಾರಿಗಳ ಪರ್ಮಿಷನ್ ತೆಗೆದುಕೊಂಡಿದ್ದಾರೆ.

ಶ್ರೀ ಜಿ. ರಾಜುಗೌಡ : ಪಾಯಿಂಟ್ ಆಫ್ ಆರ್ಡರ್.

ಅಧ್ಯಕ್ಷರು : ರಾಜುಗೌಡರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ.

ಶ್ರೀ ಜಿ. ರಾಜೂಗೌಡ : ಮಾನ್ಯ ಅಧ್ಯಕ್ಷರೇ, ನನ್ನದೊಂದು ಕ್ರಿಯಾಲೋಪ. ಮಾನ್ಯ ವಿರೋಧಪಕ್ಷದ ನಾಯಕರು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುತ್ತಾ, ಈ ರಾಜ್ಯದ ಗೃಹಸಚಿವರು, ಆರೋಪಿ ಜೊತೆಯಲ್ಲಿ ಮೆರವಣಿಗೆ ಹೋಗಿದ್ದಾರೆ ಎಂಬ ಮಾತನ್ನು ಹೇಳಿದ್ದಾರೆ. ದಯಮಾಡಿ, ಆರೋಪಿ ಮತ್ತು ಆಪಾದಿತ ಇವೆರಡರ ಬಗ್ಗೆ ನಾನು ಸೂಕ್ಷ್ಮವಾಗಿ ತಿಳಿಸುತ್ತಿದ್ದೇನೆ. ಇವತ್ತು ನನ್ನ ಮೇಲೆ ನೂರೆಂಟು ಆರೋಪ ಇರಬಹುದು. ನಾನು ಬರೀ ಆರೋಪಿ. ಆರೋಪಿಗಳು ನ್ಯಾಯಾಲಯದಲ್ಲಿ ಸ್ಥಿರಪಟ್ಟಾಗ ಆಪಾದಿತ. ಅವರು ಆಪಾದಿತನ ಜೊತೆ ಮೆರವಣಿಗೆ ಹೋಗಿಲ್ಲ. ಆರೋಪಿಗಳ ಜೊತೆ ಹೋಗಿದ್ದಾರೆ. ಆರೋಪಿ, ಆಪಾದಿತ ಆದಾಗ, ನ್ಯಾಯಾಲಯದಲ್ಲಿ ಸ್ಥಿರ ಪಟ್ಟಾಗ, ಅಂತಹವರ ಜೊತೆ ಮಾನ್ಯ ಸಚಿವರು ಮೆರವಣಿಗೆ ಹೋದಾಗ, ಅದು ತಪ್ಪು ಎಂದು ಹೇಳುವುದಕ್ಕೆ ಸಾಧ್ಯ. ನನ್ನ ಮೇಲೆ ಸಾವಿರೆಂಟು ಆರೋಪಗಳು ಇವೆ, ನಾನು ಆಪಾದಿತ ಯಾವಾಗ ಆಗುತ್ತೇನೆ, ಆಪಾದಿತ ಆಗತಕ್ಕಂತಾದ್ದು, ನ್ಯಾಯಾಲಯದಲ್ಲಿ ಆರೋಪಗಳು ಸ್ಥಿರಪಟ್ಟಾಗ. ಅಂತಹ ಸಂದರ್ಭದಲ್ಲಿ ಹೋದಾಗ ತಪ್ಪು ಎಂದು ಹೇಳಬಹುದೇ ಹೊರತು, ಇವತ್ತು ಆರೋಪಿಗಳ ಜೊತೆಯಲ್ಲಿ ಹೋದುದು ತಪ್ಪಲ್ಲವೆಂದು ನನ್ನ ಅಭಿಪ್ರಾಯ.

ಶ್ರೀ ಡಿ. ಬಿ. ಚಂದ್ರೇಗೌಡ : ಅಧ್ಯಕ್ಷರೇ, ರಾಜುಗೌಡರಿಗೆ ಅರ್ಥವಾಯಿತೋ ಇಲ್ಲವೋ ಗೊತ್ತಿಲ್ಲ. ಒಂದೇ ಒಂದು ಸಣ್ಣ ಪ್ರಶ್ನೆ ಏನೆಂದರೆ, The case is in the stage of investigation. ಫಸ್ಟ್ ಇನ್‌ವೆಸ್ಟಿಗೇಷನ್ ಸ್ಟೇಜ್ ಮುಗಿದು, ಎಫ್.ಐ.ಆರ್ ಹಾಕಿ, ಅದರ ಮೇಲೆ ಅವರನ್ನು ಅರೆಸ್ಟ್‌ಮಾಡಿ ಕೋರ್ಟ್‌ನವರು ಅವರನ್ನು ಜಾಮೀನು

ಮೇಲೆ ಬಿಡುಗಡೆ ಮಾಡಿದ್ದಾರೆ. ಇದು ಇನ್ನೂ 302ರ ಮೇಲೆ ಚರ್ಚೆ ಇರತಕ್ಕಂಥ ಸಂದರ್ಭದಲ್ಲಿ ರಾಜ್ಯದ ಹೋಮ್ ಮಿನಿಸ್ಟರು, ಈ ಅಪರಾಧಿಗಳ ಜೊತೆ ಇದ್ದರೆ, ಎಷ್ಟರ ಮಟ್ಟಿಗೆ ಇನ್‌ವೆಸ್ಟಿಗೇಷನ್ ಆಗಬಹುದು ಎನ್ನುವಂಥ ಸಂಶಯ. ಆದ್ದರಿಂದ, ಅಪರಾಧ ಹೌದೋ ಅಲ್ಲವೋ ಕೋರ್ಟಿನವರು ತೀರ್ಮಾನ ಮಾಡುತ್ತಾರೆ. But, It has come in the way of the investigation. That is the question here.

ಶ್ರೀ ಆರ್.ವಿ. ದೇಶಪಾಂಡೆ : ಅಧ್ಯಕ್ಷರೇ, ಮಾನ್ಯ ಚಂದ್ರೇಗೌಡರು ಹೇಳಿದ ಹಾಗೆ, ಚಾರ್ಜ್‌ಷೀಟ್ ಹಾಕಬಹುದು. 'B' Summary ಆಗಬಹುದು, 'C' Summary ಆಗಬಹುದು. ಅದು ಗೊತ್ತಿಲ್ಲ. To the merit of the case, I am not going. ಇವತ್ತು ಇನ್‌ವೆಸ್ಟಿಗೇಷನ್ ನಡೆಯುತ್ತಾ ಇದೆ. ಇನ್‌ವೆಸ್ಟಿಗೇಷನ್ ನಡೆಯುವಾಗ, ರಾಜ್ಯದ ಗೃಹಸಚಿವರು, ಆರೋಪಿಗಳನ್ನು ತೆಗೆದುಕೊಂಡು ವಿಜಯೋತ್ಸವ ಮಾಡುವುದು, ಪ್ರೊಸೆಷನ್ ಮಾಡಿದರೆ, ಅದೂ ಯಾವ ಹಳ್ಳಿಯಲ್ಲಿ ಶಾಲಾ ಸಮಾರಂಭಕ್ಕೆ ಹೋಗಿದ್ದಾರೆ. ಆ ಹಳ್ಳಿಯಿಂದ ಆರೋಪಿ ಇರುವ ಹಳ್ಳಿಗೆ 3-4 ಕಿಲೋಮೀಟರ್ ಇರಬಹುದು. ಆ ಆರೋಪಿಗಳು ಏಕೆ ಬಂದರು. ಇವರು ಯಾವ ಕಾರ್ಯಕ್ರಮಕ್ಕೆ ಹೋಗಿದ್ದು, ಸರ್ಕಾರಿ ಪದವಿಪೂರ್ವ ಕಾಲೇಜಿನ ಸಮಾರಂಭ. ಹಾಗಾಗಿ ಈ ಆರೋಪಿಗಳು ಆ ಹಳ್ಳಿಯಲ್ಲಿ ಉಳಿದಿಲ್ಲ. ಈ ಹಳ್ಳಿಯಿಂದ 3-4 ಕಿಲೋಮೀಟರ್ ದೂರ ಇರುತ್ತಾರೆ. ಇವರು ಏಕೆ ಈ ಕಾರ್ಯಕ್ರಮಕ್ಕೆ ಬಂದರು? ಅಂದರೆ, ನೀವು ಆ ದಿನ ವಿಜಯೋತ್ಸವ ಆಚರಿಸುತ್ತಾ ಇದ್ದೀರಿ. ಅವರು ರಿಲೀಸ್ ಆಯಿತಲ್ಲ, ಆ ವಿಜಯೋತ್ಸವ. ಹಾಗಾಗಿ ಇವತ್ತು ಮಾನ್ಯ ಗೃಹಸಚಿವರು ಈ ಮಟ್ಟಕ್ಕೆ ಇಳಿದರೆ, ಇವರು ಜನತೆಗೆ ಯಾವ ರೀತಿಯ ಸಂರಕ್ಷಣೆ ಕೊಡುತ್ತಾರೆ. ಇವರು ಹೋಮ್ ಮಿನಿಸ್ಟರಾಗಿ ಮುಂದುವರಿಯುವುದಕ್ಕೆ ಏನು ಅರ್ಹತೆ ಇದೆ. ಹಾಗಾಗಿ ಇವತ್ತು ನಾನೀಗಾಗಲೇ ಒಂದು ಮಾತು ಹೇಳಿದೆ. ಇವತ್ತು ಲೋಕಾಯುಕ್ತದ ಬಗ್ಗೆ ಅವರು ಒಂದು ಒಳ್ಳೆಯ ಮಾತು ಹೇಳಿದರು. ನನಗೆ ಲೋಕಾಯುಕ್ತದವರು ನೋಟೀಸ್ ಕೊಟ್ಟಿಲ್ಲ. Theatre Entertainment Tax ಬಗ್ಗೆ ನಿಮ್ಮ ವಿವರಣೆ ಕೇಳಿದ್ದಾರೆ.

ಶ್ರೀ ಚೌಡರೆಡ್ಡಿ : ಇನ್ನೂ ಮುಂದೆ ಹೋಗಿ, ಸದನದ ಸಮಿತಿ ಮಾಡಿ, ತನಿಖೆ ಮಾಡಿ. ಬೇಕಾದರೆ, ನಾನು ರಾಜಕೀಯದಿಂದ ಬಿಟ್ಟುಹೋಗುತ್ತೇನೆಂದೂ ಹೇಳಿದ್ದೇನೆ. ನೀವು ಸದನದ ಸಮಿತಿ ಮಾಡಿ.

ಶ್ರೀ ಆರ್.ವಿ. ದೇಶಪಾಂಡೆ : I agree, I am happy. ನೀವೇನು ಘರ್ಷಣೆ ತೋರಿಸುತ್ತಿದ್ದೀರಿ, ಈ ತರಹ ಘರ್ಷಣೆ ನನಗೆ ತೋರಿಸಬೇಡಿ. ನೀವೇನು ಹೇಳಿದಿರಿ, ಲ್ಯಾಂಡ್ ಗ್ರಾಂಟ್ ವಿಚಾರದಲ್ಲಿ ನಾವು ಮಾಡಿಲ್ಲ. ಸರ್ಕಾರವೇ, ಪಟ್ಟಣದಲ್ಲಿದ್ದರೆ, 52 ಪರ್ಸೆಂಟ್ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಕೊಡಬೇಕಾಗುತ್ತದೆ. ಅದು ಪಟ್ಟಣದಲ್ಲಿದ್ದರೂ ಸಹ ಗ್ರಾಮಾಂತರ ಪ್ರದೇಶವೆಂದು ಹೇಳಿ, ನಾವು ಒಂದೂವರೆ ಲಕ್ಷ ರೂಪಾಯಿ ಟ್ಯಾಕ್ಸ್

ತಪ್ಪಿಸಲಿಲ್ಲ. ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ತಾವು ಹೇಳಿದಿರಿ, ಸಂತೋಷ. ಆದರೆ, ಲೋಕಾಯುಕ್ತದವರು ನಿಮ್ಮ ವಿವರಣೆ ಕೇಳಿದ್ದಾರೆ. ಸೆಪ್ಟೆಂಬರ್‌ರವರೆಗೆ ನಿಮಗೆ ಟೈಮ್ ಕೊಟ್ಟಿದ್ದಾರೆ. ಆ ಫ್ಯಾಕ್ಟನ್ನು ನೀವು ಡಿನೈ ಮಾಡುವುದಕ್ಕಾಗುವುದಿಲ್ಲ. ಇವತ್ತು ಸದನದ ಸಮಿತಿ ಮಾಡಿ ಎಂದು ಹೇಳುತ್ತೀರಿ. ನೀವು ರಾಜಕೀಯದಿಂದ ನಿವೃತ್ತಿಯಾಗಿ ಎಂದು ನಾನು ಏಕೆ ಹೇಳಲಿ. But, I admire that you are saying that ಪ್ರಶ್ನೆ ಏನಿದೆ, ಇದೇ ವಿಚಾರದಲ್ಲಿ ಆ ಮಾತು ಹೇಳಿ. ಈ ವಿಚಾರದಲ್ಲಿ ಆ ಮಾತು ಹೇಳಿ. ಈ ವಿಚಾರದಲ್ಲಿ ಆರೋಪಿ ಜೊತೆ ಪ್ರೊಸೆಷನ್ ಮಾಡುತ್ತಿದ್ದೀರಿ. ಇವತ್ತು ಯಾರ ಮರ್ಡರ್ ಆಗಿದೆ, ಯಾವ ಜನ ದುಃಖದಲ್ಲಿ, ತೊಂದರೆಯಲ್ಲಿ ಇದ್ದಾರೆ, ಅವರಿಗೆ ಯಾವ ತರಹದ ನ್ಯಾಯ ಕೊಡುವುದಕ್ಕೆ ಸಾಧ್ಯ?

1.20 ಪಿ.ಎಂ.

ಮಾನ್ಯ ಅಧ್ಯಕ್ಷರೇ, ಈ ವಿಚಾರದಲ್ಲಿ ನಾನು ಮಾನ್ಯ ಸಚಿವರಿಗೆ ವಿನಂತಿ ಮಾಡುತ್ತಿದ್ದೇನೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ನಮ್ಮದೇ ಆದ ಒಂದು ಕಲ್ಚರ್ ಇದೆ. ಈ ತರಹ ಗೂಂಡಾಗಳ ಜೊತೆ, ರೌಡಿಗಳ ಜೊತೆ ಪ್ರೊಸೆಷನ್‌ಲ್ಲಿ ಹೋಗಿದ್ದೂ ಯಾವತ್ತೂ ನಮ್ಮ ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಆಗಿಲ್ಲ. ಮಾನ್ಯ ಗೃಹಸಚಿವರು ಗೌರವದಿಂದ ರಾಜೀನಾಮೆ ಕೊಡಬೇಕು. ಒಂದು ಒಳ್ಳೆಯ ಪ್ರೆಸಿಡೆಂಟ್ ನೀವು ಹಾಕಿ ಕೊಡಬೇಕು ಮುಂದೆ ಇಂಥಾದ್ದು ಯಾವುದೂ ಆಗಬಾರದು. ನಾನು ಮುಖ್ಯಮಂತ್ರಿಗಳನ್ನು ಒತ್ತಾಯಿಸುತ್ತಿದ್ದೇನೆ ಅವರು ತಮ್ಮ ಕ್ಯಾಬಿನೇಟ್‌ನಿಂದ ಇವರನ್ನು ವಜಾ ಮಾಡಬೇಕು, ನೀವು ಮಾಡಿಲ್ಲ ಅಂದರೆ ಇದರಿಂದ ಒಂದು ಮಾತು ಮಾತ್ರ ಬಹಳ ಸ್ಪಷ್ಟವಾಗುತ್ತದೆ, ಮುಖ್ಯಮಂತ್ರಿಗಳು ಕೇವಲ ಮಾಡಲ್ ಬಗ್ಗೆ ಪ್ಲೀಜ್ ಮಾಡುತ್ತಾರೆ, ಇಂಪ್ಲಿಮೆಂಟ್ ಮಾಡುವ ಇಚ್ಛೆ ಅವರಿಗೆ ಇಲ್ಲ ಎಂದು ನಾವು ಹಲವಾರು ಪ್ರಕರಣಗಳನ್ನು ಅವರ ಗಮನಕ್ಕೆ ತಂದಿದ್ದೇವೆ. ಯಾವ ಪ್ರಕರಣದಲ್ಲೂ ಸಹ ಮುಖ್ಯಮಂತ್ರಿಗಳಿಗೆ ಕ್ರಮ ತೆಗೆದುಕೊಳ್ಳುವ ಮನೋಧೈರ್ಯ ಇಲ್ಲ. ಆದ್ದರಿಂದ ಈ ಪ್ರಕರಣದಲ್ಲೂ ಅವರು ಹಾಗೆ ಮಾಡುತ್ತಾರೆ. ಇದು ಒಂದು ಸ್ಪಷ್ಟವಾದ ಪ್ರಕರಣ ಇದೆ. ಈ ಮಾತನ್ನು ಅವರು ಡಿನೈ ಮಾಡಲಿಕ್ಕೆ ಸಾಧ್ಯ ಇಲ್ಲ ಇದು ಕ್ಲಿಯರ್ ಆಗಿದೆ ನಾವು ಫೋಟೋಸ್ ಕೊಟ್ಟಿದ್ದೇವೆ. ಅವರು ಇದರಲ್ಲಿ ಇನ್‌ವಾಲ್ವ್ ಆಗಿದ್ದಾರೆ ಅವರ ರಾಜೀನಾಮೆಯನ್ನು ನಾನು ಒತ್ತಾಯಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ. ಭೈರೇಗೌಡ : ಮಾನ್ಯ ಅಧ್ಯಕ್ಷರೇ, ನಾನು ವಿಶೇಷವಾಗಿ ಏನನ್ನೂ ಹೇಳುವುದಕ್ಕೆ ಹೋಗುವುದಿಲ್ಲ ಮಾನ್ಯ ನಾಯಕರು ಎಲ್ಲವನ್ನು ಹೇಳಿದ್ದಾರೆ....

ಶ್ರೀ ಚೌಡರೆಡ್ಡಿ : ಮಾನ್ಯ ಅಧ್ಯಕ್ಷರೇ ಅವರ ಪರವಾಗಿ ಅವರೇ ಹೇಳಿದ್ದಾರೆ.

ಶ್ರೀ ಸಿ. ಭೈರೇಗೌಡ : ನನಗೆ ಪರವಾನಿಗೆ ಕೊಡತಕ್ಕಂಥವರು ನೀವು ನಾನು ಯಾರ ಪರವಾನಿಗೆಯನ್ನು ತೆಗೆದುಕೊಂಡು ಬಂದು ಇಲ್ಲಿ ಕುಳಿತುಕೊಳ್ಳಬೇಕಾಗಿಲ್ಲ.

ಶ್ರೀ ಚೌಡರೆಡ್ಡಿ : ಯಾರು ಯಾರ ಪರವಾಗಿ ಮಾತನಾಡುತ್ತಾರೆ ಎನ್ನುವುದು ಎಲ್ಲರಿಗೂ ಗೊತ್ತಿದೆ.

ಅಧ್ಯಕ್ಷರು : ಈ ಫೋಟೋದಲ್ಲಿ ನಿಮ್ಮಂತೆ ಕಾಣುತ್ತದೆ.

ಶ್ರೀ ಸಿ. ಭೈರೇಗೌಡ : ನಾನಂತೂ ಇರಲಿಲ್ಲ. ಇಂತಹ ಅವಿವೇಕದ ಕೆಲಸ ಮಾಡುವುದರಿಂದಲೇ ಈ ರೀತಿ ಎಡವಟ್ಟು ಆಗುವುದು. ನಾನೇನು ಮಾಡುವುದಕ್ಕೆ ಆಗುತ್ತದೆ.

ಶ್ರೀ ಚೌಡರೆಡ್ಡಿ : ಸ್ವಂತ ಊರಿನಲ್ಲಿ 7-9-94ರ ನಡವಳಿಕೆಯಲ್ಲಿ ಅಧ್ಯಕ್ಷರು ನೀಡಿದ ಆದೇಶದಂತೆ ತೆಗೆದು ಹಾಕಲಾಗಿದೆ ಎಂದು ಹೇಳಿಸತಕ್ಕಂಥ ಅವಿವೇಕದ ಕೆಲಸ ನಾನು ಯಾವತ್ತೂ ಮಾಡಿಲ್ಲ.

ಶ್ರೀ ಸಿ. ಭೈರೇಗೌಡ : ಇರಲಿ, ಅದನ್ನು ನಾನು ಹೇಳುವುದಿಲ್ಲ ಅದು ಜನಕ್ಕೆ ಗೊತ್ತಿದೆ. ಮಾನ್ಯ ಅಧ್ಯಕ್ಷರೇ, ಈಗ ಇಲ್ಲಿ ಇಂಟರ್‌ಫಿಯರ್‌ನ್ಸ್ ಯಾವ ರೀತಿ ಆಗಿದೆ ಎನ್ನುವುದರ ಬಗ್ಗೆ ಈಗ ಅವರು ಏನೋ ಹೇಳುತ್ತಾರೆ ಹೇಳಲಿ ಮಾನ್ಯ ಅಧ್ಯಕ್ಷರೇ, ಅವರು ಬಾಯಿಗೆ ಬಂದಂತೆ ಹೇಳುವುದಲ್ಲ ಜವಾಬ್ದಾರಿ ಸ್ಥಾನದಲ್ಲಿ ಕುಳಿತಿದ್ದಾರೆ. ಜವಾಬ್ದಾರಿಯಿಂದ ಮಾತನಾಡಬೇಕು.

ಅಧ್ಯಕ್ಷರು : ಭೈರೇಗೌಡರೇ ...

ಶ್ರೀ ಚೌಡರೆಡ್ಡಿ : ನಾನು ಅವರಿಗೆ ಜವಾಬ್ದಾರಿಯಿಂದಲೇ ತಿಳಿಸುತ್ತಿದ್ದೇನೆ.

(ಗೊಂದಲ)

ಶ್ರೀ ಎಚ್. ಏಕಾಂತಯ್ಯ : ಮಾನ್ಯ ಅಧ್ಯಕ್ಷರೇ, ನನ್ನದೊಂದು ಕ್ರಿಯಾಲೋಪ ಇದೆ. ಒಬ್ಬ ಸದಸ್ಯರು ಮತ್ತೊಬ್ಬ ಸದಸ್ಯರ ಮೇಲೆ ಆರೋಪ ಮಾಡಬೇಕಾದರೆ ಯಾವಾಗ ಆರೋಪ ಮಾಡಬೇಕು, ಆರೋಪ ಮಾಡುವಾಗ ಯಾವ ನಿಯಮಗಳನ್ನು ಅನುಸರಿಸಬೇಕು ಎಂದು ನಮ್ಮ ನಿಯಮಗಳಲ್ಲಿ ಇದೆ. ಅದನ್ನು ಎಲ್ಲದಕ್ಕಿಂತ ಹೆಚ್ಚಾಗಿ ನಾವು ಮಾತ್ರ ಅಲ್ಲಿ ಯಾರು ಜವಾಬ್ದಾರಿ ಸ್ಥಾನದಲ್ಲಿದ್ದಾರೆ, ಆ ಸ್ಥಾನದಲ್ಲಿರುವಂತಹ ಸದಸ್ಯರು ಇನ್ನೊಬ್ಬ ಸದಸ್ಯರ ಮೇಲೆ ಆರೋಪ ಮಾಡಿದಾಗ ಅದನ್ನು ಇನ್ನು ಹೆಚ್ಚು ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಮಾನ್ಯ ಮಂತ್ರಿಗಳು ಮತ್ತೊಬ್ಬ ಸದಸ್ಯರ ಮೇಲೆ ಆರೋಪ ಮಾಡಲಿಕ್ಕೆ ನಿಯಮಗಳ ಪ್ರಕಾರ ಅಧಿಕಾರ ಇಲ್ಲ.

ಶ್ರೀ ಮದನಗೋಪಾಲನಾಯಕ್ : ಅವರು ಯಾರ ಮೇಲೂ ಆರೋಪ ಮಾಡಲಿಲ್ಲ.

ಶ್ರೀ ಹೆಚ್ ಏಕಾಂತಯ್ಯ : ಆರೋಪ ಮಾಡಿಲ್ಲ ಎಂದು ಮಾನ್ಯ ಮಂತ್ರಿಗಳು ಹೇಳುವುದಾದರೆ ಮಾನ್ಯ ಅಧ್ಯಕ್ಷರು ಹೇಳುವುದಾದರೆ ನನ್ನದು ತಕರಾರು ಇಲ್ಲ. ಈಗ ಆರೋಪ ಮಾಡಿದ್ದಾರೆ. ಅದನ್ನು ತಾವು ಕಡತ ತರಿಸಿ ನೋಡಿ.

ಶ್ರೀ ಮದನಗೋಪಾಲನಾಯಕ್ : ಕಡತ ತೆಗೆಯಲಿ.

ಶ್ರೀ ಹೆಚ್ ಏಕಾಂತಯ್ಯ : ಅವರು ಎಲ್ಲಿ ಕೇಳುತ್ತಿದ್ದಾರೋ ಗೊತ್ತಿಲ್ಲ. ಅಲ್ಲಿ ರೆಕಾರ್ಡ್ ಆಗಿದೆ. ನೋಡಿ ಸ್ವಾಮಿ, ಆರೋಪ ಅಲ್ಲವೇನು ಸ್ವಾಮಿ.

(ಗೊಂದಲ)

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ತಾವು ರೆಕಾರ್ಡ್ ನೋಡಿ ...

ಶ್ರೀ ಹೆಚ್ ಏಕಾಂತಯ್ಯ : ಮಾನ್ಯ ಮಂತ್ರಿಗಳಾದ ರಾಮಸ್ವಾಮಿಯವರು ಯಾವತ್ತೂ ಅರ್ಧಾನೇ ಹೇಳುವುದು. ಇನ್ನು ಉಳಿದಿದ್ದು ಹೇಳುವುದೇ ಇಲ್ಲ. ಅವರು ಅಷ್ಟೇ ಹೇಳಿದ್ದರೆ ನಾನು ರಾಜೀನಾಮೆ ಕೊಡುತ್ತೇನೆ. ಇಲ್ಲದಿದ್ದರೆ ನೀವು ಕೊಡುತ್ತೀರಾ? ಸುಮ್ಮನೆ ಏತಕ್ಕೆ ಇದೆಲ್ಲಾ ಹೇಳುತ್ತೀರಿ.

ಶ್ರೀ ಹಾರ್ನಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ಅವರು ನಾನು ಮಾಡಿಲ್ಲ ಎಂದರು.

ಶ್ರೀ ಹೆಚ್ ಏಕಾಂತಯ್ಯ : ಸ್ವಾಮಿ, ಯಾವತ್ತು ಒಬ್ಬ ಮನುಷ್ಯ ಹೇಳುವುದನ್ನು ಪೂರಾ ಕೇಳುವಂತಹ ಸಂಯಮ ತಮಗೆ ಇರಬೇಕು. ಈ ಸದನದ ಒಳಗೆ ಯಾರೊಬ್ಬ ಸದಸ್ಯರು ಆರೋಪ ಮಾಡಬೇಕಾದರೆ ದಯವಿಟ್ಟು ತಾವು ಒಂದು ಮಾತನ್ನು ಕೇಳಬೇಕು. ನನ್ನ ಕ್ರಿಯಾಲೋಪ ಇದೆ, ಈ ಸದನದ ಒಬ್ಬ ಸದಸ್ಯರು ಮತ್ತೊಬ್ಬ ಸದಸ್ಯರ ಮೇಲೆ ಆರೋಪ ಮಾಡಬೇಕಾದರೆ ನಿಯಮಗಳನ್ನು ಅನುಸರಿಸಿ ಮಾಡಬೇಕು. ತಮಗೆ ಆ ರೀತಿ ಸೂಚನೆ ಕೊಡದೆ, ನಮಗೆ ನೋಟೀಸ್ ಕೊಡದೇ ಮಾನ್ಯ ಮಂತ್ರಿಗಳು ಹೇಳಿದಂತಹ ಮಾತು ಕಾನೂನಿಗೆ ಮತ್ತು ನಿಯಮಕ್ಕೆ ವಿರುದ್ಧ ಆದ್ದರಿಂದ ಮೊದಲು ಆ ಮಾತನ್ನು ತೆಗೆದು ಹಾಕಬೇಕು. ಅದು ನನ್ನ ಆಕ್ಷೇಪಣೆ.

ಅಧ್ಯಕ್ಷರು : ನಾನು ತರಿಸಿ ನೋಡುತ್ತೇನೆ ಆರೋಪ ಇದ್ದರೆ ತೆಗೆದು ಹಾಕೋಣ.

ಶ್ರೀ ಸಿ. ಭೈರೇಗೌಡ : ಮಾನ್ಯ ಅಧ್ಯಕ್ಷರೇ, ನಾನು ವಿಶೇಷವಾಗಿ ಏನನ್ನೂ ಹೇಳುವುದಕ್ಕೆ ಹೋಗುವುದಿಲ್ಲ. ಅದರ ಬಗ್ಗೆ ತಾವು ಈಗಾಗಲೇ ತಮ್ಮ ತೀರ್ಪನ್ನು ಕೊಟ್ಟಿದ್ದೀರಿ. ಆ ಮಾತು ಕಡತದಲ್ಲಿ ಇರುವುದಕ್ಕೆ ಲಾಯಕ್ ಅಲ್ಲ ದಯವಿಟ್ಟು ಅದನ್ನು ಕಡತದಿಂದ ತೆಗೆದುಹಾಕಬೇಕು ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಒತ್ತಿ ಹೇಳುತ್ತಾ ಮಾನ್ಯ ವಿರೋಧಪಕ್ಷದ ನಾಯಕರು ವಿಸ್ತಾರವಾಗಿ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಇಲ್ಲಿ ನಡೆದಿರುವುದನ್ನು ಅವರು ಹೇಳಿದ್ದಾರೆ. ಇಲ್ಲಿ ಘಟನೆ ನಡೆದ 24 ಗಂಟೆಗಳ ನಂತರ ಯಾರು ಸತ್ತಿದ್ದಾರೋ ಅಂತಹವರ ಪರವಾಗಿರತಕ್ಕಂಥವರ ಮೇಲೆ ಅಟೆಮ್ಸ್ ಟು ಮರ್ಡರ್ ಎನ್ನತಕ್ಕಂಥ ಒಂದು ದೂರು ಬರುತ್ತದೆ. ಈ ಘಟನೆ ನಡೆದ 24 ಗಂಟೆಗಳ ನಂತರ. ಸೂಪರಿಂಟೆಂಡ್ ಆಫ್ ಪೋಲೀಸ್ ಹೋಗಿದ್ದಾರೆ. ಇಡೀ ಪೋಲೀಸ್ ವ್ಯವಸ್ಥೆ ಅಲ್ಲಿದೆ. ಈ ಘಟನೆ ನಡೆದಿದ್ದು ನಿಜವಾಗಿದ್ದರೆ ಅಲ್ಲಿರತಕ್ಕಂಥ ಪೋಲೀಸಿನವರಿಗೆ ಏತಕ್ಕೆ ಈ ಮಾಹಿತಿಯನ್ನು ಕೊಡಲಿಲ್ಲ? ಆ ಮಾಹಿತಿ ಕೊಡಲಿಲ್ಲ ಅದರ ಸುಳಿವು ಕೂಡ ಹೇಳಲಿಲ್ಲ. ಬಾಯಿ ಮಾತಿನ ದೂರನ್ನೂ ಸಹ ಯಾರೂ ಕೊಟ್ಟಿಲ್ಲ ಅಲ್ಲಿ, ಏನೂ ಕೊಟ್ಟಿಲ್ಲ 24 ಗಂಟೆಗಳ ನಂತರ ಏನು ದೂರು ಬರುತ್ತದೆ ಆ ದೂರನ್ನು ಪೋಲೀಸಿನವರು ರಿಜಿಸ್ಟಾರ್ ಮಾಡುತ್ತಾರೆ.

ಅದನ್ನು ಜಾಮೀನಿನ ಮೇಲೆ ಇವರು ಹಾಕತಕ್ಕಂಥ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರೇ, ಅದನ್ನು ಪ್ರಾಸಿಕ್ಯೂಟರ್ ಹೇಳುತ್ತಾರೆ ಅದು ಫಾಲ್ಸ್ ಕಂಪ್ಲೇಂಟ್ ಎಂದು. ಆದರೂ ಸಹ 307ನೇ ಕಲಂನ ಪ್ರಕಾರ ಕೆಲವು ಅಪರಾಧಿಗಳನ್ನು ಬಂಧನ ಮಾಡತಕ್ಕಂಥ ಕೆಲಸ ಪೋಲೀಸಿನವರಿಂದ ಆಗಿದೆ. ಇದರಲ್ಲಿ ಹಸ್ತಕ್ಷೇಪ ಇದೆಯೇ ಇಲ್ಲವೇ ಎನ್ನತಕ್ಕಂಥಾದ್ದನ್ನು ದಯವಿಟ್ಟು ತಾವು ಆಲೋಚನೆ ಮಾಡಬೇಕು. ಕೋರ್ಟಿನ ಎದುರಿಗೆ ಅದು ಸುಳ್ಳು ಮೊಕದ್ದಮೆ ಎಂದು ಪೋಲೀಸಿನವರೇ ಹೇಳುತ್ತಾರೆ, ಪ್ರಾಸಿಕ್ಯೂಟರ್ ಹೇಳುತ್ತಾರೆ ಅದರ ಬಗ್ಗೆ ಅದೇ ಪೋಲೀಸಿನವರೇ ಪುನಃ ಪುನಃ ಬಂಧನ ಮಾಡುವುದಕ್ಕೆ ಮುಂದಾಗುತ್ತಾರೆ ಅಂದರೆ ಇದಕ್ಕೆ ಕಾರಣ ಏನು? ಇದಕ್ಕೆ ಕಾರಣ ನಾವು ಎಲ್ಲೂ ದುಡುಕಬೇಕಾಗಿಲ್ಲ ಈ ಕಾರಣಕ್ಕೆ ಯಾರು ಮೂಲ ಎನ್ನತಕ್ಕಂಥಾದ್ದು ಇವತ್ತಿನ ದಿವಸ ಗೊತ್ತಿದೆ. ಆದ್ದರಿಂದ ಮಾನ್ಯ ಅಧ್ಯಕ್ಷರೇ, ಈ ಮೊಕದ್ದಮೆ ಏನು ಇದೆ ಅದು ನಿಜವೋ ಸುಳ್ಳೋ ಗೊತ್ತಿಲ್ಲ, ತರಾತುರಿಯಲ್ಲಿ ಚಾರ್ಜ್ ಶೀಟ್ ಕೂಡ ಹಾಕಿದ್ದಾರೆ ಎನ್ನತಕ್ಕಂಥಾದ್ದು ಸಬ್ಜೆಕ್ಟ್ ಟು ಕರೆಕ್ಷನ್, ಅಂಡ್ ವೆರಿಫಿಕೇಷನ್. ಏಕೆಂದರೆ ಇವೆಲ್ಲವನ್ನೂ ಮುಚ್ಚಬೇಕು ಎನ್ನತಕ್ಕ ಒಂದೇ ಒಂದು ಕಾರಣಕ್ಕಾಗಿ ತರಾತುರಿಯಲ್ಲಿ ನಡೆಸುತ್ತಿದ್ದಾರೆ. ನಾನು ಇವತ್ತು ಪ್ರಸ್ತಾಪ ಮಾಡಿರತಕ್ಕಂಥಾದ್ದು ಇಲ್ಲಿ ಒಂದು ಕೋಟಿಯಲ್ಲಿ ಒಂದೇ ಒಂದು ಪ್ರಸ್ತಾಪ ಮಾಡ ಥಾದ್ದು ಇವರಿಗೇನು ಬೇರೆ ಕೆಲಸವೇ ಇಲ್ಲ ಎಲ್ಲಿ ನೋಡಿದರೆ ಅಲ್ಲಿ ಕೈ ಹಾಕತಕ್ಕ ಥಾದ್ದು.

ಶ್ರೀ ಚೌಡರೆಡ್ಡಿ : ಹೌದು, ಹೌದು...

ಶ್ರೀ ಸಿ. ಭೈರೇಗೌಡ : ಎಲ್ಲಿ ನೋಡಿದರೆ ಅಲ್ಲಿ ಕೈ ಹಾಕುವುದು ಕಾನ್ಸ್‌ಟೇಬಲ್‌ನಿಂದ ಹಿಡಿದು ಎಲ್ಲದ್ದಕ್ಕೂ ಕೂಡ ಕೈ ಹಾಕುತ್ತಾ ಇದ್ದೀರಿ.

(ಗೊಂದಲ)

ಶ್ರೀ ಸಿ. ಭೈರೇಗೌಡ : ಚಾರ್ಜುಶೀಟ್ ಹಾಕಿದ್ದರೂ ಸಹ ಅದನ್ನು ವಾಪಸ್ಸು ತೆಗೆದುಕೊಂಡು, ಈ ಮೊಕದ್ದಮೆಯನ್ನು ಸಿಬಿಐ ಮೂಲಕ ಇನ್‌ವೆಸ್ಟಿಗೇಷನ್ ಮಾಡಿ ಬೇರೆ ಚಾರ್ಜ್‌ಸೀಟನ್ನು ಹಾಕುವುದಕ್ಕೆ ವ್ಯವಸ್ಥೆ ಮಾಡಬೇಕು ಎಂದು ಸರ್ಕಾರವನ್ನು ನಾನು ತಮ್ಮ ಮೂಲಕ ಒತ್ತಾಯ ಮಾಡಿ, ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಚೌಡರೆಡ್ಡಿ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೇ, ನನಗೆ ಅವರ ಬಗ್ಗೆ ಬಹಳ ಗೌರವ ಇದೆ. ಅದರಲ್ಲೂ ಕೂಡ ನಮ್ಮ ದೇಶಪಾಂಡೆಯವರ ಬಗ್ಗೆ ವಿಪರೀತ ಗೌರವ ಇದೆ. ಅವರು ಏತಕ್ಕೆ ಇಂತಹ ಸಣ್ಣ ವಿಚಾರದಲ್ಲಿ ಕೈ ಹಾಕಿದರೋ ನನಗೆ ಗೊತ್ತಿಲ್ಲ. ಈಗ ಎಲ್ಲರಿಗೂ ಗೊತ್ತಾಯಿತು ಈ ಸದನಕ್ಕೂ ಕೂಡ ಗೊತ್ತಾಯಿತು. ಏಕೆಂದರೆ ಅವರು ಲೀಡರ್ ಇದ್ದಾರೆ, ಅವರು ಕೈ ಹಾಕಲಿಲ್ಲ ಅಂದರೆ ಗತ್ಯಂತರವೇ ಇಲ್ಲ. ಅದಕ್ಕೆ ಕೈ ಹಾಕಲೇಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಅಂತಹ ಒತ್ತಡ ಬಂದಿರಬಹುದು.

ಶ್ರೀ ಚೌಡರೆಡ್ಡಿ : ಹೌದು. ಈಗ ಎಲ್ಲರಿಗೂ ಗೊತ್ತಾಯಿತು. ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಸನ್ಮಾನ್ಯ ದೇಶಪಾಂಡೆಯವರು ಏನು ಹೇಳಿದರು ಹಸ್ತಕ್ಷೇಪ ಮಾಡಬಾರದು ಅಂತ ಅದರಲ್ಲಿ ನನಗೆ ನೂರಕ್ಕೆ ನೂರು ಪಾಲು ನಂಬಿಕೆ ಇದೆ. ಇವತ್ತು ಹೇಳುತ್ತೇನೆ ನೋಡಿ ಯಾವುದಾದರೂ ಮರ್ಡರ್ ಕೇಸ್ ಆಗಲಿ ಹೀನಸ್ ಕೇಸ್ ಆಗಲಿ ನನ್ನ ಜೀವನದಲ್ಲಿ ಇವತ್ತೇ ಅಲ್ಲ ನನ್ನ ಜೀವನದಲ್ಲಿ ನಾನು ಕೈ ಎಂದೂ ಹಾಕಿಲ್ಲ. ಅಷ್ಟು ನಾನು ಮಾರಲ್ ಪ್ರಿನ್ಸಿಪಲ್ಸ್ ಇಟ್ಟುಕೊಂಡಿದ್ದೇನೆ. ನಮ್ಮ ಚಿಂತಾಮಣಿ ಕ್ಷೇತ್ರ ಒಂದು ತರಹ ಪೆಕ್ಯೂಲಿಯರ್ ಕ್ಷೇತ್ರ. ಇಲ್ಲಿ ಕಾಂಗ್ರೆಸ್, ಜನತಾ ದಳ, ಸಿ.ಪಿ.ಎಂ. ಅಂತ ಬರುವುದಿಲ್ಲ. ಅಲ್ಲಿ ಇವತ್ತು ಇರತಕ್ಕಂಥಾದ್ದು 50-60 ವರ್ಷಗಳಿಂದ ಇರತಕ್ಕಂಥಾದ್ದು ಆಂಜನೇಯರೆಡ್ಡಿ ಫ್ಯಾಮಿಲಿ ಗಂಗಿರೆಡ್ಡಿ ಫ್ಯಾಮಿಲಿ ಅಂತಲೇ ಬರತಕ್ಕಂಥಾದ್ದು. ಅಲ್ಲಿ ಏನಾಗಿದೆ ಅಂದರೆ ಕೆಲವು ಏರಿಯಾಸ್ fortified ಏರಿಯಾಸ್. ನೀವು ಪ್ರಾಣ ಕೊಡಿ ಅವರು ಈ ಕಡೆ ಬರುವುದಿಲ್ಲ. ನಮ್ಮ ಕಡೆಯವರು ಪ್ರಾಣ ಕೊಡಲಿ. ಆ ಕಡೆ ಹೋಗುವುದಿಲ್ಲ. ಆ ತರಹ ಒಂದು ಡಿಸ್ಟ್ರಿಂಗ್‌ವಿಶ್ ಆಗಿ ಕಂಪ್ಲೀಟ್ ಡೀ-ಮಾರ್ಕೇಶನ್ ಆಗಿದೆ ಅದಕ್ಕೆ ಕೆಲವರು ಮಹಾನುಭಾವರು ಹೇಳುತ್ತಾರೆ, ನನಗೇನೂ ಇಲ್ಲ 78ರಲ್ಲಿ ನನ್ನ ಏರಿಯಾಸ್ ಎಲ್ಲಾ ಕೆಲವರಿಗೆ ಕೊಟ್ಟು ಅವರ ಏರಿಯಾಸ್ ನನಗೆ ಕೊಟ್ಟರೆ ಇವರು ಶಾಶ್ವತವಾಗಿ ರಾಜಕೀಯದಿಂದ ಪತ್ತೆ ಇಲ್ಲದೆ ಹೋಗಿಬಿಡುತ್ತಾರೆ ಅಂತ. ಅದು ನಡೆಯಿತು ಪುನಃ ಅದು ಚೇಂಜ್ ಆಯಿತು. ನನ್ನ ಕ್ಷೇತ್ರ ಕೂಡ ಚೇಂಜ್ ಆಯಿತು. ಆದರೆ ಅದು ಆಗಲಿಲ್ಲ, ಭಗವಂತ. ತಾನು ಮಾಡಿದ್ದುದು ಒಂದು ಆದರೆ ನಡೆದಿದ್ದು ಒಂದು ಆಯಿತು. ಆ ರೀತಿ ಆಗಿದೆ. ನಮ್ಮ ಚಿಂತಾಮಣಿಯಿಂದ 14-15 ಕಿಲೋಮಿಟರ್ ಬಿಟ್ಟರೆ ಕೆಲವು ಏರಿಯಾಸ್ ಎಲ್ಲಾ ಇದೆ. ಇವತ್ತಿಗೂ ಅಷ್ಟೇ ಸೋಮಕ್ಕನಹಳ್ಳಿ ಅಂತ ಏನು ಹೇಳುತ್ತೇನೆ, ನಾನು ಐದು ವರ್ಷಕ್ಕೂ ಎರಡು ಸಲ ಮೂರು ಸಲ ಸಹ ಹೋಗುವುದಿಲ್ಲ. ವೋಟಿಂಗ್ ಪ್ಯಾಟರ್ನ್ ತೆಗೆದುಕೊಳ್ಳಿ. ಬೇರೆ ಕ್ಷೇತ್ರಕ್ಕೂ ಅದಕ್ಕೂ ಸಂಬಂಧವೇ ಇಲ್ಲ. 1952ರಿಂದ ಅಲ್ಲಿ ನನ್ನ ತಂದೆಯವರು ಸ್ಪರ್ಧಿಸುತ್ತಿದ್ದರು, ಅವರು ಗೆದ್ದಿದ್ದಾರೆ, ಸೋತಿದ್ದಾರೆ, ಪುನಃ ನಾನೂ ಸ್ಪರ್ಧೆ ಮಾಡಿದ್ದೇನೆ. ಒಂದು ಸಲ ನಾನೂ ಸೋತಿದ್ದೇನೆ, ವೋಟಿಂಗ್ ಪ್ಯಾಟರ್ನ್ ತೆಗೆದುಕೊಂಡರೆ ಯಾವತ್ತೂ, ಆ ಹಳ್ಳಿಗಳಲ್ಲಿ ನೀವು ಪ್ರಾಣ ಕೊಟ್ಟುಬಿಡಿ, ಎಂದರೂ ಸರಿಯೇ. ಈ ಭಟ್ಟರಹಳ್ಳಿಯಲ್ಲಿ ನಾವೊಂದು ಕಾಲೇಜ್ ಮಾಡಿದ್ದೇವೆ. ಅಲ್ಲಿ ಪಿಎಚ್‌ಸಿ ಮಾಡಿದ್ದೇವೆ. ಅನೇಕ ಕೆಲಸಗಳನ್ನು ಮಾಡಿದರೂ ಕೂಡ ಯಾವತ್ತೂ ಅವರು ನನಗೆ ವೋಟ್ ಕೊಡುವ ಪರಿಸ್ಥಿತಿಯೇ ಇಲ್ಲ. ಅದಕ್ಕಾಗಿ ನಾವು ಯಾರು ಎತ್ತ ಅಂತ ತಿಳಿದುಕೊಳ್ಳುವ ಪ್ರಶ್ನೆಗೂ ಹೋಗುವುದಿಲ್ಲ. ಇದರಲ್ಲಿ ಹಸ್ತಕ್ಷೇಪವೂ ಆಗಿಲ್ಲ. ಅನೇಕ ಊರುಗಳಲ್ಲಿ ನಾವು ಮೆರವಣಿಗೆ ಹೋಗುತ್ತಿದ್ದೆವು. ಅಲ್ಲ ಒಂದು ಕಾಲೇಜ್ ಓಪನ್‌ಗೆ ಹೋಗಿದ್ದಾಗ ಮೆರವಣಿಗೆ ಮಾಡಿದ್ದಾರೆ ; ಇಲ್ಲ ಅಂತಲ್ಲ, ಅವರು ಕುಳಿತಿದ್ದರೆ ಅವರು ಯಾರು ಅಂತ ನನಗಂತೂ ಗೊತ್ತಿಲ್ಲ. ಕೆಲವರು ಬರುತ್ತಾರೆ, ಕೆಲವರು ಹಾರ ಹಾಕುತ್ತಾರೆ, ಕೆಲವರು ಹೋಗುತ್ತಾ ಇರುತ್ತಾರೆ. ಆದ್ದರಿಂದ ಅವರು ನನಗಂತೂ ಪರಿಚಯ ಇಲ್ಲ. ಈ ಕೇಸಿನಲ್ಲಂತೂ ಖಂಡಿತಾ ನಾನು ಭಗವಂತನ ಮೇಲೆ

ಸಾಕ್ಷಿ ಮಾಡಿ ಹೇಳುತ್ತೇನೆ. ನಾನು ಯಾವ ಮರ್ಡರ್ ಕೇಸಿನಲ್ಲೂ ಇದುವರೆಗೂ ಕೈಹಾಕಿಲ್ಲ. ಅಷ್ಟು ಮಾತ್ರ ತಿಳಿಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಅಧ್ಯಕ್ಷರೇ, ಮಾನ್ಯ ಸಚಿವರು ಹೇಳಿದರು ನನಗೆ ಗೊತ್ತಿಲ್ಲ, ನಿಜ ಅವರು ಒಂದೂ ಮಾತು ಹೇಳಿದರು, ನಾವು ಮೆರವಣಿಗೆಯಲ್ಲಿದ್ದಾಗ ನೂರಾರು ಜನ ಬರುತ್ತಾರೆ, ಯಾರು ಅಕ್ಯೂಸ್ಡ್ ಅಂತ ಗುರುತು ಹಿಡಿಯುವುದು ಕಷ್ಟ. ಆದರೆ ಇಲ್ಲಿ ಆ ಪ್ರಕಾರ ಪರಿಸ್ಥಿತಿ ಇಲ್ಲ. ನಿಮ್ಮ ಎಡಗೈಗೊಂದು ಬಲಗೈಗೊಂದು ಹಿಡಿದುಕೊಂಡು ಕುಳಿತಿದ್ದಾರೆ. ಹಾಗೆ ಮೆರವಣಿಗೆ ಹೋದಾಗ ಸಾವಿರಾರು ಜನರಲ್ಲಿ ಯಾರು ಬಂದು ಹಾರಹಾಕುತ್ತಾರೆ ಎಂದು ಗೊತ್ತಾಗುವುದಿಲ್ಲ. ಈ ಪ್ರಕರಣದಲ್ಲಿ ನಿಮಗಾಗಿ ಒಂದು ಸೋಫಾ ಹಾಕಿ ಅದರಲ್ಲಿ ನಿಮ್ಮ ಎಡಗೈ ಬಲಗೈಗಳಿಗೊಂದು ಹಾರ ಹಿಡಿದುಕೊಂಡು ಜೊತೆಯಲ್ಲಿದ್ದಾರೆ one point, I may go one step further. You may be innocent ಆದರೆ ನಿಮ್ಮ ಪಬ್ಲಿಕ್ ಬಿಹೇವಿಯರ್ ಇದೆಯಲ್ಲ that is contrary to the position you hold. You are morally bound to resign. You have no other choice left. ಹಾಗಾಗಿ ನಾನು ಮುಖ್ಯಮಂತ್ರಿಗಳನ್ನು ಒತ್ತಾಯಮಾಡುತ್ತಿದ್ದೇನೆ. as you say, it may be a fact that you may be innocent. But when you are associated with the criminals who are the accused in murder case. ಇಂತಹ ಸಂದರ್ಭದಲ್ಲಿ ನೀವು ಸಂಪರ್ಕ ಮಾಡಿದರೂ ತಪ್ಪಾಗುತ್ತದೆ. ಪೋಲೀಸರ ಮೇಲೆ ಏನು ಪರಿಣಾಮ ಆಗಬಹುದು? ಯಾವ ಬಗೆಯ ತನಿಖೆ ಆಗಲು ಈಗ ಸಾಧ್ಯವಿದೆ? ಯಾವ ತರಹದ ನ್ಯಾಯ ಇಲ್ಲಿ ಸಿಗಲಿಕ್ಕೆ ಸಾಧ್ಯ ಇದೆ? ತಾವೇ ಹೇಳಿ? ಆರೋಪಿ ಜತೆ ತಾವೇ ಮೆರವಣಿಗೆ ಹೋದರೆ ಪೋಲೀಸರು ಹೇಗೆ ಕೆಲಸ ಮಾಡಲು ಸಾಧ್ಯ? you are duty bound morally, you may be innocent. I don't deny. ನೀವು ಹೇಳುವುದು ಇರಬಹುದು. ಆದರೆ ಪಬ್ಲಿಕ್ ಇಮೇಜ್ ಇಟ್ಟುಕೊಳ್ಳಬೇಕಾಗುತ್ತದೆ. ಅದನ್ನು ಇಟ್ಟುಕೊಳ್ಳುವುದಕ್ಕೆ ಅಸಮರ್ಥರಾಗಿದ್ದೀರಿ. So you are bound to resign ನೀವು ರಾಜಿನಾಮೆ ಮಾಡುವುದಿಲ್ಲ ಎಂದರೆ ಮುಖ್ಯಮಂತ್ರಿಗಳನ್ನು ನಾನು ಒತ್ತಾಯ ಮಾಡಿದ್ದೇನೆ you should drop him from the Ministry. See 504,506 ಇದೆ. I can understand. It is a very heinous offence 302 ಇದ್ದಾಗ When you are associated with the Accused. It is not correct.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : 351ನೇ ನಿಯಮದ ಪ್ರಕಾರ ಆಪಾದನೆ ಮಾಡಲು ಸಭೆಯಲ್ಲಿ ಪ್ರಸ್ತಾಪಿಸಲೂ ಅವಕಾಶ ಇದೆ. ಇದರಲ್ಲಿ ಬಹು ಮುಖ್ಯವಾದ ಅಂಶವೇನೆಂದರೆ ಅವರು ಮೆರವಣಿಗೆಯಲ್ಲಿ ಹೋಗುತ್ತಿದ್ದರು, ಅವರ ಪಕ್ಕದಲ್ಲಿ ಕುಳಿತಿದ್ದರು it is a fact ----ವಾಸ್ತವಾಂಶ, ಆದರೆ ಅವರ ಮೇಲೆ ಮೊಕದ್ದಮೆ ಇದ್ದ ವಿಷಯ ಇವರಿಗೆ ಗೊತ್ತಿತ್ತೇ?

(laugh)

SRI Harnahalli Ramaswamy : You cannot laugh at it like that. Unless you prove that there was nexus between the accused and the Hon'ble Minister and unless the Minister knew that they were the accused in a murder case. ಇದನ್ನು ನೀವು ಇನ್‌ಫರೆನ್ಸ್ ಮಾಡುವುದಕ್ಕೆ ಆಗುವುದಿಲ್ಲ. ಜೊತೆಯಲ್ಲಿದ್ದುದು ಫ್ಯಾಕ್ಟ್ ಎಂದು ತಾವು ತೋರಿಸಿದ್ದೀರಿ, ಮಂತ್ರಿಗಳಿಗೆ ಅದರ ನೆಂಟಸ್ತನ ಇದೆಯೇ, ಬಿಜಿನೆಸ್ ಸಂಪರ್ಕ ಇದೆಯೇ? ಇದಕ್ಕೆ ಮುಂಚೆ ನಾವು ಎಷ್ಟೋ ಕಡೆ, ತಾವೂ ಹೋಗುತ್ತಿರುತ್ತೇವೆ, ಅನೇಕ ಸಲ ಜನ ನಮ್ಮ ಹಿಂದೆ ನಿಂತು ಫೋಟೋ ತೆಗೆಸಿಕೊಳ್ಳುತ್ತಾರೆ, ತಮ್ಮ ಹಿಂದೆ ಇರುತ್ತಾರೆ. ಸಮುದ್ರ ತೀರದಲ್ಲಿರೋರು, ಅಲ್ಲಿ ಬಹಳ ಜನ ಸ್ಮಗ್ಲರ್ಸ್ ಇರುತ್ತಾರೆ, ಆ ಸ್ಮಗ್ಲರ್ಸ್ ನಿಮ್ಮ ಹತ್ತಿರ ನಿಂತು ಫೋಟೋ ತೆಗೆಸಿಕೊಂಡುಬಿಟ್ಟರೆ ನಾವು ಮಾನ್ಯ ವಿರೋಧಪಕ್ಷದ ನಾಯಕರು ಅವರ ಬಗ್ಗೆ ಹೇಳಲು ಆಗುತ್ತದೆಯೇ? ನಾವು ಹಳ್ಳಿಗಳಿಗೆ ಸಭೆಗೆ ಹೋದಾಗ ಬೇಕಾದಷ್ಟು ಜನ ಬರುತ್ತಾರೆ, ತಾವು ಬಹಳ ದೊಡ್ಡ ಮನುಷ್ಯರು, ನಿಮ್ಮ ಜೊತೆಯಲ್ಲಿ ನಿಂತು ಫೋಟೋ ತೆಗೆಸಿಕೊಂಡರೆ ನಮಗೆ ಬಹಳ ಒಳ್ಳೆಯದಾಗುತ್ತದೆ ಎಂದು. ಈಗ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟರು, ಇಲ್ಲಿಗೇ ಮುಗಿಯಬೇಕು,, ನನ್ನ ಒಂದೇ ಪಾಯಿಂಟ್ ಏನೆಂದರೆ, ಇವರಿಗೂ ಅಪರಾಧಿಗಳೆನಿಸಿಕೊಂಡವರಿಗೂ ಯಾವ ಸಂಬಂಧದ ತಳಕನ್ನೂ ವಿರೋಧಪಕ್ಷದ ನಾಯಕರಾಗಲಿ ಬಾಕಿ ಸದಸ್ಯರಾಗಲಿ ತೋರಿಸಿಲ್ಲ ಎಂದು ಮಾತ್ರ ಹೇಳಲು ಇಷ್ಟಪಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ: ಮಾನ್ಯ ಸಂಸದೀಯ ಸಚಿವರು ಬಹಳ ಚೆನ್ನಾಗಿ ಆರ್ಗ್ಯು ಮಾಡಿದ್ದಾರೆ. But it is a bad case. ಇದರಲ್ಲಿ ಎರಡು ಮೂರು ವಿಚಾರ, ಒಂದು ಮರ್ಡರ್ ಆಗಿತ್ತು nobody denies ಅವರು ಅಕ್ಯೂಸ್ಡ್ ಇದ್ದಾರೆ, ಅದನ್ನೂ ನಾನು ಡಿನೈ ಮಾಡುವುದಿಲ್ಲ.

ಶ್ರೀ ಚೌಡರೆಡ್ಡಿ : ಒಂದು ನಿಮಿಷ. ನಾವು ಅಲ್ಲಿ ಕೆಲವು ಹಳ್ಳಿಗಳಲ್ಲಿ ಹೋಗುವುದೇ ಇಲ್ಲ. ಆ ಸೋಮಕ್ಕನಹಳ್ಳಿಯವರು ಯಾವತ್ತಿಗೂ ನಮಗೆ ಒಲವೇ ತೋರಿಸಿಲ್ಲ. ನಾನು ಹಿನ್ನೆಲೆ ಏಕೆ ಹೇಳುತ್ತೇನೆಂದರೆ ನನ್ನ ಕ್ಷೇತ್ರದ ಕೆಲವು ಕಡೆ ಹೋಗುವುದೇ ಇಲ್ಲ. Absolutely we are keeping ourselves outside. ಯಾರು ಅಂತ ಕೂಡ ಗೊತ್ತಾಗುವುದಿಲ್ಲ. ಅದನ್ನು ತಲೆಗೆ ಹಾಕಿಕೊಳ್ಳುವುದಕ್ಕೆ ಹೋಗುವುದಿಲ್ಲ. ದಯವಿಟ್ಟು ಅದನ್ನು ಅರ್ಥಮಾಡಿಕೊಳ್ಳಿ.

ಶ್ರೀ ಆರ್.ವಿ.ದೇಶಪಾಂಡೆ : ರಾಜ್ಯದ ಗೃಹಸಚಿವರು ಇವರು, ಇವರ ಕ್ಷೇತ್ರದಲ್ಲಿ ಕೊಲೆ ಆಗುತ್ತದೆ. 11.6.94ಕ್ಕೆ, 21 ಜನ ಅಕ್ಯೂಸ್ಡ್ ಇದ್ದಾರೆ. Accused 1 and 5 ನಿಮ್ಮ ಕಾಂಗ್ರೆಸ್ ಪಕ್ಷದ ವರ್ಕರ್ಸ್ ಇದ್ದಾರೆ, ನಿಮಗೆ ಕೊಲೆ ಆಗಿದ್ದುದು ಗೊತ್ತಿಲ್ಲ

ಎಂದರೆ ನೀವು ಗೃಹಸಚಿವರಾಗಿರಲು ನಾಲಾಯಕ್. You are unfit to be the Home Minister of the State, when you don't know what is happening.

ಶ್ರೀ ಚೌಡರೆಡ್ಡಿ : ಅವರು ವರ್ಕರ್ಸ್ ಅಲ್ಲ.

(Interruptions)

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಗೃಹಸಚಿವರಿಗೆ ರಾಜ್ಯದಲ್ಲಾಗುವ ಎಲ್ಲಾ ಅಪರಾಧಗಳ ವಿವರಗಳು ಅವರ ತಲೆಯೊಳಗೆ ಇರಬೇಕೆಂದು ಅಪೇಕ್ಷಿಸುವುದೇ? ತಾವು ಈ ವಿಷಯವನ್ನು ದಯವಿಟ್ಟು ತಾವು ಪರ್‌ಸ್ಯೂ ಮಾಡಬೇಡಿ. ಅವರು ಹೇಳಿದ ಹಾಗೆ ಇದಕ್ಕೆ ಹಿನ್ನೆಲೆಯಿದೆ. ನಿಮ್ಮದೇನೂ ತಪ್ಪಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ಯಾರದ್ದೂ ತಪ್ಪಿಲ್ಲ. ಆದರೆ ಅದಕ್ಕೆ ಅವರು ಅವಕಾಶ ಮಾಡಿಕೊಟ್ಟರು, ಇವರ ಕ್ಷೇತ್ರದಲ್ಲಿ ಕೊಲೆಯಾಗುತ್ತದೆ, ಇವರು ಗೃಹಸಚಿವರಿದ್ದು ಅದು ಗೊತ್ತಿಲ್ಲ ಎಂದರೆ ಯಾರು ನಂಬಲಿಕ್ಕೆ ಸಾಧ್ಯ ಇದೆ? ಅದಕ್ಕೇ ನಾನು ಮತ್ತೊಮ್ಮೆ ವಿನಂತಿ ಮಾಡುತ್ತೇನೆ. You should resign. ಅಥವಾ ಮುಖ್ಯಮಂತ್ರಿಗಳಿಗೆ ವಿನಂತಿ ಮಾಡುತ್ತೇನೆ. ಅವರೂ ಬಹಳ ಮಾರಲ್ ವಿಷಯ ಮಾತನಾಡುತ್ತಾರೆ. ಪಬ್ಲಿಕ್ ಲೈಫಲ್ಲಿ how you behave ಎಂದು ನಾನು ನೋಡಿದ್ದೇನೆ ನಿಮ್ಮನ್ನು. ಆ ದೃಷ್ಟಿಯಿಂದ ತಮ್ಮ ಕೊಲೀಗ್ ಸಹ ಆ ರೀತಿ ಬಿಹೇವ್ ಮಾಡಬೇಕೆಂದು ತಾವು ಅಪೇಕ್ಷಿಸುತ್ತೀರೆಂದು ಭಾವಿಸಿದ್ದೇನೆ. ತಾವೂ ಇದರ ಬಗ್ಗೆ ಬೆಳಕು ಚೆಲ್ಲಬೇಕು, ತಮ್ಮ ಅಭಿಪ್ರಾಯ ಈ ನಾಡಿನ ಜನರಿಗೆ ಗೊತ್ತಾಗಬೇಕು. ಏಕೆಂದರೆ, ತಮ್ಮ ಕೈಗೆ ಫೋಟೋ ಕೊಟ್ಟಿದ್ದೇನೆ ಅದರಲ್ಲಿ ಎಡ ಬಲ ಕೈಗಳಲ್ಲಿ ಅಕ್ಯೂಸ್ಡ್1 ಮತ್ತು 5 ಮೆರವಣಿಗೆ ಮಾಡುತ್ತಿದ್ದಾರೆ, ಮತ್ತು ಗೃಹಸಚಿವರು ನನಗೇನೂ ಗೊತ್ತಿಲ್ಲ ಅಂತ ಹೇಳಿ ಜಾರಿಬಿಟ್ಟರೆ ಹೇಗೆ? ಇದನ್ನು ಒಪ್ಪಿಕೊಳ್ಳುವುದಿಲ್ಲ ಎಂದರೆ I have no objection.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಇದು ಮನೆ ಜಗಳ ನಮಗೂ ನಿಮಗೂ ಏಕೆ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಸಿ. ಭೈರೇಗೌಡ : ಅಧ್ಯಕ್ಷರೇ,ನಾನು ಹೇಳಿದಂಥ ಅಂಶಕ್ಕೆ ಉತ್ತರ ಬಂದಿಲ್ಲ. ಹಸ್ತಕ್ಷೇಪ ಇದೆ ಎಂಬುದು 307ನೇ ಕಲಮಿನ ಪ್ರಕಾರ 25 ಗಂಟೆಯಾದ ಮೇಲೆ ಒಂದು ಕೇಸ್ ರಿಜಿಸ್ಟರ್ ಆಗುತ್ತದೆ ಅದಕ್ಕೆ ಅವರು ಜಾಮಿನಿಗೆ ಅರ್ಜಿ ಹಾಕಿದಾಗ ಅದು ಸುಳ್ಳು ಕೇಸ್ ಅಂತ ಪೋಲೀಸರು ಹಾಕಿದ್ದಾರೆ, ಅದು ಬರವಣಿಗೆಯಲ್ಲಿದೆ. ಆದ್ದರಿಂದ ಪುನಃ ಅವರನ್ನು ಅರೆಸ್ಟ್ ಮಾಡುತ್ತಾರೆ, ಆ ಕೇಸ್ ಮುಂದುವರೆಸುತ್ತಾರೆ. ಒಂದು ಸಾರಿ ಇಲ್ಲ ಎನ್ನುತ್ತಾರೆ. ಮತ್ತೊಂದು ಸಾರಿ ಅವರನ್ನು ಅರೆಸ್ಟ್ ಮಾಡುತ್ತಾರೆ, ಇದಕ್ಕೆ ಸರ್ಕಾರದಿಂದ ಉತ್ತರ ಕೊಡಿಸಿ.

ಅಧ್ಯಕ್ಷರು : ಚರ್ಚೆ ಇಲ್ಲಿಗೆ ಮುಕ್ತಾಯವಾಯಿತು. ಅವರು ಹೇಳಿಕೆ ಕೊಟ್ಟಿದ್ದಾರೆ. ಇದು ಮುಗಿಯಿತು.

Sri. R.v. Deshpande : He should be dropped from the Cabinet.. I have got every right to demand from the Chief Minister.

(Interruptions)

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ಸದಸ್ಯರು ಬಹಳ ಗಂಭೀರವಾದ ಪ್ರಶ್ನೆ ಎತ್ತಿದ್ದಾರೆ. ಆ ಬಗ್ಗೆ ಮಾನ್ಯ ಗೃಹ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಬಹಳ ವಿಶೇಷವಾಗಿ ಜಾಗೃತೆಯಿಂದ ಈ ವಿಚಾರವನ್ನು ವಿಮರ್ಶೆ ಮಾಡಬೇಕಾಗುತ್ತದೆ. ಯಾವುದೇ ಸಂಶಯಾಸ್ಪದವಾದಂತಹ ವ್ಯಕ್ತಿಗಳ ಜೊತೆಯಲ್ಲಿ ಸಾರ್ವಜನಿಕ ಜೀವನದಲ್ಲಿ ಇರತಕ್ಕಂತಹ ನಾವುಗಳು ಬಹಳ ಜಾಗೃತೆಯಿಂದ ಇರಬೇಕಾಗುತ್ತದೆ. ಏಕೆಂದರೆ, ಅವರು ನಮ್ಮ ಜೊತೆಯಲ್ಲಿ ಕಂಡರೆ ಸಾರ್ವಜನಿಕರಿಗೆ ಕೂಡ ಪರಿಣಾಮ ಆಗುತ್ತದೆ ಮತ್ತು ಅಧಿಕಾರಿಗಳಿಗೂ ಕೂಡ ಅದರಿಂದ ವಿಶೇಷವಾದಂತಹ ಪರಿಣಾಮವಾಗುತ್ತದೆ. ಅದನ್ನು ಇಲ್ಲವೆಂದು ಹೇಳಲಿಕ್ಕೆ ನಾನು ಒಪ್ಪುವುದಿಲ್ಲ. ಅದರಲ್ಲೂ ಗೃಹ ಮಂತ್ರಿಗಳಾದಂತಹವರು ಇನ್ನೂ ಜಾಸ್ತಿ ಜಾಗ್ರತೆಯಿಂದಿರಬೇಕಾಗುತ್ತದೆ. ಜನಗಳ ಗುಂಪು ಮತ್ತೊಂದು ಬರುವಾಗ ಎಚ್ಚರದಿಂದ ಇರಬೇಕಾಗುತ್ತದೆ. ಅದಕ್ಕೇ ನಾನು ಬಹಳ ಹಿಂದೆ ಮುಂದೆ ನೋಡಿಕೊಂಡೇ ಹೋಗುವುದು ಯಾರಾದರೂ ನನ್ನ ಜೊತೆಯಲ್ಲಿ ಇದ್ದಾರಾ ಎಂದು...

ಶ್ರೀ ವಾಟಾಳ್ ನಾಗರಾಜ್ : ಈ ಭಯ ನಿಮಗೆ ಯಾವಾಗ ಬಂತು. ಭೈರೇಗೌಡರ ಟೇಪ್ ಆದಮೇಲೋ...

ಶ್ರೀ ಚೌಡರೆಡ್ಡಿ : ಅದರಲ್ಲಿ ಯಾರ್ಯಾರು ಏನೇನು ಎಂದು ಜಡ್ಜ್‌ಮೆಂಟೇ ಇದೆ. ಸ್ವಲ್ಪ ಆ ಜಡ್ಜ್‌ಮೆಂಟ್ ನೋಡಿ ಬಿಟ್ಟರೆ ಯಾರ್ಯಾರ ಚರಿತ್ರೆ ಏನು ಎಂದು ಚೆನ್ನಾಗಿ ಕಾಣುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಸಾರ್ವಜನಿಕರ ಜೀವನದಲ್ಲಿರತಕ್ಕಂತಹ ನಾವು ಅದರಲ್ಲೂ ಅಧಿಕಾರ ಸ್ಥಾನದಲ್ಲಿರತಕ್ಕಂತಹ ನಾವು ಬಹಳ ಜಾಗ್ರತೆಯಿಂದ ಇರಬೇಕಾಗುತ್ತದೆ. ಇದನ್ನು ನಮ್ಮ ರಾಜಕೀಯ ವೈರಿಗಳು ಉಪಯೋಗ ಮಾಡಿಕೊಳ್ಳುತ್ತಾರೆ. I don't think you have a political rival. This will be made use of by our political rivals. ವಿಷಯ ಅಷ್ಟೇ ಇರುವುದು. ಅದರಲ್ಲಿ ನಮ್ಮ ಪಾತ್ರ ಎಷ್ಟು ಆ ಪ್ರಶ್ನೆ ಇರುವುದಿಲ್ಲ.This will be made use of ಯಾರಾದರೂ ಉಪಯೋಗ ಮಾಡಿಕೊಳ್ಳಬಹುದು. ನಮ್ಮ ಮೇಲೆ ತಮ್ಮ ಮೇಲೆ ಉಪಯೋಗ ಮಾಡಿಕೊಳ್ಳಬಹುದು ಮಾನ್ಯ ಸಭಾಧ್ಯಕ್ಷರ ಮೇಲೆ ಉಪಯೋಗ ಮಾಡಿಕೊಳ್ಳಬಹುದು. ಒಂದೊಂದು ಸಂದರ್ಭ

ಬಂದಾಗ ಉಪಯೋಗ ಮಾಡಿಕೊಳ್ಳಬಹುದು. ಇಲ್ಲಿ ಮೂಲತಃ ಪ್ರಶ್ನೆ ಇರುವುದು ಇಷ್ಟೇ ; ಈ ಪದವನ್ನು ಅವರ ಮೇಲೆ ತೇಜೋವಧೆ ಮಾಡಲಿಕ್ಕೆ ರಾಜಕೀಯವಾಗಿ ಉಪಯೋಗ ಮಾಡುವುದು ಒಂದು ಬಾರಿ. ನಾನು ಬಹಳ ಗಂಭೀರವಾಗಿ ಮಾತನಾಡುತ್ತಿದ್ದೇನೆ. ಸರಳವಾಗಿ ನಾನು ಈ ಮಾತನ್ನಾಡುತ್ತಿಲ್ಲ. ಇದನ್ನು ಗೃಹ ಮಂತ್ರಿಗಳ ಮೇಲೆ ಉಪಯೋಗ ಮಾಡಲಿಕ್ಕೆ ಅವಕಾಶ ಸಿಕ್ಕಿದೆ. Naturally you raised this issue. I don't say you have something against Mr. Chowda Reddy. You have nothing against him. Somebody also may have their own internal rivalry. Mr. Chowda Reddy exposed himself to this kind of a problem which any day all of us can be exposed. ಇದು ಏನೂ ದೊಡ್ಡ ಸಾಧನೆ ಎಂದು ಹೇಳಲಿಕ್ಕಾಗುವುದಿಲ್ಲ. ಫೋಟೋ ತೆಗೆದು ಅವರನ್ನು ತೇಜೋವಧೆ ಮಾಡತಕ್ಕಂಥಾದ್ದು. They can do it against Mr. Chowda Reddy today. ನಾಳೆ ನಿಮ್ಮ ಮೇಲೆ ಆಗಬಹುದು ನಮ್ಮ ಮೇಲೆ ಆಗಬಹುದು ಎಲ್ಲರ ಮೇಲೆ ಆಗಬಹುದು. ಇದನ್ನು ಇವತ್ತು ವಿಮರ್ಶೆ ಮಾಡಬೇಕು. ಸಾರ್ವಜನಿಕ ಕ್ಷೇತ್ರದಲ್ಲಿರತಕ್ಕಂತಹ ಸಾರ್ವಜನಿಕವಾಗಿ ಜೀವನ ಮಾಡತಕ್ಕಂತಹವರು ಬಹಳ ಸೂಕ್ಷ್ಮವಾಗಿ ಜಾಗೃತರಾಗಿ ಇರಬೇಕಾಗುತ್ತದೆ. ಅವರ ಸುತ್ತಮುತ್ತ ಇರುವುದನ್ನು ಜನ ತಪ್ಪು ತಿಳಿಯಲಿಕ್ಕೆ ಅವಕಾಶ ಕೂಡ ಇದೆ. On our part, we should take all care, . Even after something happens. ಇಡೀ ರಾಜಕೀಯ ಭವಿಷ್ಯ ನಾಶ ಮಾಡುವುದಕ್ಕೆ Is it a reason for attributing certain motives that you are also a part and parcel of it. ಅಫೆನ್ಸ್ ಇದರಲ್ಲಿ ಆದ ಪ್ರಕಾರ 12ನೇ ತಾರೀಖು ಜೂನ್‌ನಲ್ಲಿ ಆಗಿದೆ. ಪ್ರೊಸೆಷನ್ ಆದದ್ದು 12.8.94 ಅಥವಾ 13.8.94. ಈ ಎರಡು ತಿಂಗಳ ಅವಧಿಯಲ್ಲಿ ಈ ಒಂದು ಖೂನಿ ದಾವೆ ಆಗಿದೆ ಅಥವಾ ಒಂದು ಮರ್ಡರ್ ಆಗಿದೆ ಇದರ ಬಗ್ಗೆ ಅಂದರೆ ಇದಕ್ಕೂ ಅದಕ್ಕೂ ಮಾನ್ಯ ಗೃಹ ಮಂತ್ರಿಗಳಿಗೂ ಸಂಬಂಧ ಇಲ್ಲ. ಯಾರು ಎಂದೂ ಆಪಾದನೆಯನ್ನು ಮಾಡುವ ಹಾಗೆ ಇಲ್ಲ. Not a whisper is made. Forget about other things. Whether a public or anybody in any way. Absolutely there was nothing to show that the Minister has directly participated in the commission of offence or abetted it or supported it. indirectly or directly.. ಇನ್‌ವಾಲ್ವ್ ಆಗಿದ್ದಾರೆ ಎನ್ನುವುದಕ್ಕೆ ಒಂದು ಚೂರು ಶಬ್ದ ಇಲ್ಲ. ಇದು ಯಾವಾಗ ಸಂಬಂಧ ಬರುತ್ತದೆ ಎಂದರೆ ಪ್ರೊಸೆಷನ್‌ಗೆ ಇವರು ಸೇರಿದ್ದರು ಎಂದು ಹೇಳಿ ಒಂದೇ ಒಂದು ಕಾರಣದಿಂದ his name has been dragged. ಪ್ರಶ್ನೆ ಮೂಲಭೂತವಾಗಿರತಕ್ಕಂಥದ್ದು ಗೃಹಮಂತ್ರಿಗಳು ಇದರಲ್ಲಿ ಶಾಮೀಲಾಗಿದ್ದಾರೆ ಪ್ರತ್ಯಕ್ಷವಾಗಿಯೋ, ಅಪ್ರತ್ಯಕ್ಷವಾಗಿಯೋ ? The position is

different. ಈ ಅಫೆನ್ಸ್‌ನಲ್ಲಿ ಅವರು ಪಾರ್ಟಿಸಿಪೇಟ್ ಮಾಡಿದ್ದಾರೆ. ಪ್ರತ್ಯಕ್ಷವಾಗಿ, ಅಪ್ರತ್ಯಕ್ಷವಾಗಿ ಅವರ ಪಾಲೇನು? ಅದರಲ್ಲೇನಾದರೂ ಇದ್ದರೆ suppose, even if an iota of evidence is there, forget about the evidence, even a whisper about this, during these two months, you are entitled to ask for his resignation and I am bound to act upon your suggestion. Let us look into it objectively, Subjectively ಇದನ್ನು ನೋಡುವುದಕ್ಕೆ ಆಗುವುದಿಲ್ಲ. A matter like the murder case, ಮಾನ್ಯ ಅಧ್ಯಕ್ಷರೇ, ನಾವು ಬಹಳ ಸುಲಭವಾಗಿ ಒಬ್ಬರ ಮೇಲೆ ಅಪಾದನೆಯನ್ನು ಹಾಕುವುದಕ್ಕೆ ಆಗುವುದಿಲ್ಲ. ಪ್ರತ್ಯಕ್ಷವಾಗಿಯಾಗಲಿ, ಅಪ್ರತ್ಯಕ್ಷವಾಗಿಯಾಗಲಿ, ಒಬ್ಬರು ಭಾಗಿಯಾಗಿದ್ದಾರೆಂದು ಒಂದು ವಿಚಾರವನ್ನು ಇವತ್ತು ಬಹಳ ಸರಳವಾಗಿ, ಬಹಳ ಲೈಟಾಗಿ ಇಂಥ ಒಂದು ಮರ್ಡರ್ ಕೇಸ್ ಮೇಲೆ ಮಾಡಿದರೆ, ನಮ್ಮ ಗತಿಯೇನಾಗಬೇಕು? ಇದು ನಮ್ಮೆಲ್ಲರ ಗತಿಯೇನಾಗಬೇಕು? ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸ ಮಾಡತಕ್ಕಂಥದ್ದಕ್ಕೆ ಇಡೀ ಸಮುದಾಯದ ಪ್ರಶ್ನೆ ಬರುತ್ತದೆ. ವೈ. ಕೆ. ರಾಮಯ್ಯನವರೆ, you should suffer, I will suffer and all of us will be eliminated.

1.50 ಪಿ.ಎಂ.

ಯಾರೂ ಉಳಿಯುವ ಹಾಗೆ ಇಲ್ಲ. All of us will be eliminated. ಈ ಪರಿಸ್ಥಿತಿಗೆ ಇವತ್ತು ನಮ್ಮನ್ನು ನಾವು ತಂದು ಇಡತಕ್ಕಂಥ ಪ್ರಶ್ನೆಯನ್ನು ನಾವು ಮಾಡಿದಾಗ ಬಹಳ ಜಾಗ್ರತೆಯಿಂದ ಇರಬೇಕಾಗುತ್ತದೆ. ಆದ್ದರಿಂದ if you own definitely throw somelight on this, he will be the first man to resign and I will be the first man to accept his resignation. We will not hesitate. ಸಾರ್ವಜನಿಕ ಜೀವನದಲ್ಲಿ ನಾವು ನ್ಯಾಯ ಮಾಡುತ್ತೇವೆ ಎಂದು ಇರಬೇಕು.

ಜನಗಳಿಗೆ ತೋರುವ ಮಟ್ಟಿದಲ್ಲೂ ಕೂಡ ಸಂಶಯಾಸ್ಪದವಾಗಿ ನಾವು ನಡೆಯಬೇಕಾದಂಥ ಅವಶ್ಯಕತೆ ಖಂಡಿತವಾಗಿಯೂ ಇದೆ. It is well taken. When this matter is raised, I was totally worried. ನಾವು ಎಲ್ಲಾ ಸನ್ಮಾನ್ಯ ಮಂತ್ರಿಗಳಿಗೆ, ಶಾಸಕರಿಗೆ ಎಲ್ಲರಿಗೂ ನನ್ನ ವಿನಂತಿ ಏನು ಹೇಳಿದರೆ please get away from such kind of people. ಆದರೆ ಇಲ್ಲಿ ಸನ್ಮಾನ್ಯ ಗೃಹಸಚಿವರು ಹೇಳುತ್ತಿದ್ದಾರೆ ಎಂದರೆ ನಾವು ಆ ಗ್ರಾಮಕ್ಕೆ ಹೋಗುವುದೇ ಇಲ್ಲ. ಆ ಗ್ರಾಮ ನಮಗೆ ಸಪೋರ್ಟ್ ಕೊಡತಕ್ಕಂಥ ಗ್ರಾಮವೇ ಅಲ್ಲ. ನಮಗೆ ಇದೆಲ್ಲ ಗೊತ್ತೇ ಆಗಲಿಲ್ಲ ಎಂದು ಹೇಳತ್ಕಂಥದ್ದು ಇದೆ.

ಶ್ರೀ ಆರ್.ವಿ.ದೇಶಪಾಂಡೆ : ಪ್ರೊಸೆಷನ್ ಆಗಿದುದು ಬೇರೆ ಗ್ರಾಮದಲ್ಲಿ.

ಶ್ರೀ ಎಂ. ವೀರಪ್ಪಮೊಯಿಲಿ : ಆದ್ದರಿಂದ ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. Even if there is an iota of doubt about the conduct of the Hon'ble Minister, I don't think even for a minute, the Minister is entitled to continue. ಆದರೆ ಅದೇ ರೀತಿ ಸನ್ಮಾನ್ಯ ಸಚಿವರಾಗಲಿ, ಅಥವಾ ಅಧಿಕಾರದಲ್ಲಿರುವ ನಾವೆಲ್ಲ. Just because our political enemies can take Advantage of a procession and photo and on that absolutely on a technical reasons, if you were to say that he has to stop down, I think 100 times; all of us should step down ಯಾವುದೇ ಸಂದರ್ಭದಲ್ಲಿ ಯಾವುದೇ ಒಂದು ಸಂಶಯದ ಕಲ್ಲು ನಮ್ಮ ಕಡೆ ಒಗೆಯದ ರೀತಿಯಲ್ಲಿ We will have to guard ourselves. ಇಲ್ಲದಿದ್ದರೆ ಅದು ಬಹಳ ಕಷ್ಟವಾಗುತ್ತದೆ. ಆದ್ದರಿಂದ ಈ ಬಗ್ಗೆ ಡಿಬೇಟನ್ನು ಇಲ್ಲಿಗೇ ಕೊನೆಗೊಳಿಸುವುದು ಒಳ್ಳೆಯದು ಎಂದು ಹೇಳುತ್ತೇನೆ. I will personally go into the matter. I can assure this H se. I do not want any doubt to be cast upon. I would ersonally go into the mattter from the date of the murder. ಪರಿಸ್ಥಿತಿ ಏನಾಗಿದೆ? ಎಲ್ಲಿಯಾದರು ಪೋಲೀಸರು ಅಥವಾ ಯಾವುದೇ ಒಂದು ಕ್ರಮದಲ್ಲಿ ಏನಾದರೂ ಲ್ಯಾಕ್ಸಿಟಿ ಇದ್ದರೆ ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳದಿದ್ದರೆ ಎಲ್ಲಿ ಯಾವ ತೊಂದರೆಯಾಗಿದೆ ಎಂದು ನೋಡಿ ಈ ತನಿಖೆಯನ್ನು ಬಹಳ ನಿಷ್ಪಕ್ಷಪಾತವಾಗಿ ಜರಗಿಸುವುದಕ್ಕೆ ಏನು ವಾತಾವರಣವನ್ನು ಮತ್ತು ಪರಿಸರವನ್ನು ನಿರ್ಮಾಣ ಮಾಡಬೇಕೋ ಅದನ್ನು ಖಂಡಿತವಾಗಿಯೂ ಕೂಡ ನಾವು ನಿರ್ಮಾಣ ಮಾಡುತ್ತೇವೆ ಎಂದು ಹೇಳಿ ಸರ್ಕಾರದ ಪರವಾಗಿ ನಾನು ಆಶ್ವಾಸನೆಯನ್ನು ಕೊಡುವುದಕ್ಕೆ ಅಪೇಕ್ಷೆ ಪಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಒಂದು ವಿಷಯವನ್ನು ಅವರ ಗಮನಕ್ಕೆ ತರಬೇಕು. ಏತಕ್ಕೆ ಗಡಿಬಿಡಿ ಮಾಡುತ್ತೀರಿ?

ಅಧ್ಯಕ್ಷರು : ಗಡಿಬಿಡಿ ಪ್ರಶ್ನೆಯಲ್ಲ. ಅವರು ವಿವರವಾಗಿ ಹೇಳಿದರಲ್ಲ.

ಶ್ರೀ ಆರ್.ವಿ.ದೇಶಪಾಂಡೆ : ಅವರ ಗಮನಕ್ಕೆ ತರಬೇಕು. ನೀವು ಗಡಿಬಿಡಿ ಮಾಡುವುದರಲ್ಲಿ ಏನೂ ಅರ್ಥವಿಲ್ಲ. We cannot run away from the issues.

ಅಧ್ಯಕ್ಷರು : ವಿವರವಾಗಿ ಅವರು ಹೇಳಿದರು.

ಶ್ರೀ ಆರ್.ವಿ.ದೇಶಪಾಂಡೆ : ಎರಡು ಮೂರು ವಿಚಾರಗಳನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, 12-6-94ರಲ್ಲಿ ಮರ್ಡರ್ ಆಯಿತು. ಫಂಕ್ಷನ್ ಆಗಿದ್ದು 13-8-94. ಎರಡು ತಿಂಗಳ ಏನು ಅವರ ಸಂಬಂಧ ಎಂದು ಹೇಳಿದರು. ಮಾನ್ಯ ಮುಖ್ಯಮಂತ್ರಿಗಳೇ, ಇಲ್ಲಿ ಏನಾಗಿದೆ ಎಂದರೆ Accused No. 1&5 and other accused were absconding. They produced themselves before the Court on 28.7.94.

21 ಜನ ಆರೋಪಿಗಳಲ್ಲಿ 9 ಜನ ಆರೋಪಿಗಳನ್ನು ಅರೆಸ್ಟ್ ಮಾಡಿದರು. ಬೇರೆ 12 ಜನ ಆರೋಪಿ ಇದ್ದರಲ್ಲ, ಅದರಲ್ಲಿ accused No. 1 and one who was in the procession, both of the accused are absconding and they produced before the court on 28.7.94 and they got anticipatory bail.

Sri Harnahally Ramaswamy : Were they absconding on the day that the procession took place?

ಶ್ರೀ ಆರ್.ವಿ. ದೇಶಪಾಂಡೆ : 28-7-94 ಕ್ಕೆ ಅವರು ಆಂಟಿಸಿಪೇಟರಿ ಬೇಲ್‌ನ್ನು ತೆಗೆದುಕೊಂಡು ರಿಲೀಜ್ ಆದರು. After that this procession took place. Still 15 days. ಇದು ಒಂದು ಎರಡನೇಯ ಪಾಯಿಂಟ್ ತಾವು ಏನು ಹೇಳುತ್ತಿದ್ದೀರಲ್ಲ, ಇವತ್ತು ಮರ್ಡರ್ ಯಾರದು ಆಗಿದೆ, ಆ ಜನರ ಮೇಲೆ ಅವರ ಸಂಬಂಧಿಕರ ಮೇಲೆ ಫಾಲ್ಸ್ 307 ಕೇಸ್‌ನ್ನು ಹಾಕಿದ್ದಾರೆ, under IPC. ಹಾಕಿದ ನಂತರ ಇವರು ಯಾವಾಗ ಅಕ್ಯೂಸ್ಡ್ ಬೇಲ್ ಅಪ್ಲಿಕೇಷನ್ ಕೊಟ್ಟರು? ಆಗ ಪ್ರಾಸಿಕ್ಯೂಟರ್ ಕಂಡೀಷನ್ ತೆಗೆದುಕೊಂಡಿದ್ದಾರೆ. ಫಾಲ್ಸ್ ಕೇಸ್ ಇದೆ ಎಂದು ಗೌರ್ನಮೆಂಟ್ ಪ್ರಾಸಿಕ್ಯೂಟರ್ ಹೇಳಿದ್ದಾರೆ. ಅದರ ಅಪೋಸಿಟ್ ಕೇಸ್ ಆಗುತ್ತಿದೆ. ಇನ್ನೋಸೆಂಟ್ ಜನರ ಮೇಲೆ ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಅವರನ್ನು ಅರೆಸ್ಟ್ ಮಾಡಿದ್ದಾರೆ. Without the Home Minister's interference ಇದು ಹೇಗೆ ಆಗುವುದಕ್ಕೆ ಸಾಧ್ಯವಿದೆ? When the prosecutor admits that it is an innocent case, it shows that there is a direct link between the Home Minister and the accused No. 1&5. So I urge again that you shoule take his resignation.

ಶ್ರೀ ಕೆ. ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡಿದ್ದನ್ನು ಗಮನಿಸಿದರೋ ಇಲ್ಲವೋ ಗೊತ್ತಾಗಲಿಲ್ಲ. ಮುಖ್ಯಮಂತ್ರಿಗಳು ಹೇಳುವಾಗ, ಅವರು ಉತ್ತರ ಕೊಡುವಾಗ 12-6-94ರಲ್ಲಿ ಏನು

ಅಪರಾಧ ನಡೆದಿದೆ, ಪ್ರೊಸೆಷನ್ ಆಗಿರತಕ್ಕಂಥದ್ದು 13-8-94ರಲ್ಲಿ ಈ ಮಧ್ಯೆ ಇವರಿಗೆ, ಗೃಹಸಚಿವರಿಗೆ ಸಂಬಂಧಪಟ್ಟಂತೆ ಯಾರಿಂದಲೂ ಯಾವ ವಿಸ್ಪರಿಂಗ್ ಕೂಡ ಇಲ್ಲ ಎನ್ನುವ ಮಾತನ್ನು ಮುಖ್ಯಮಂತ್ರಿಗಳು ಹೇಳಿದ್ದಾರೆ. ಅದಕ್ಕೆ ಮುಖ್ಯಮಂತ್ರಿಗಳು ನಾನು ಪರ್ಸನಲ್ ಆಗಿ ಅದನ್ನು ತೆಗೆಸಿ ನೋಡುತ್ತೇನೆ ಎಂದು ಹೇಳುತ್ತಿದ್ದಾರೆ. ಆ ರೀತಿ ಇದ್ದರೆ ಮುಂದೆ ಅದಕ್ಕೆ ಬರುತ್ತೇನೆ ಎಂದು ಹೇಳಿದ್ದಾರೆ. ಪ್ರಶ್ನೆ ಇಲ್ಲಿ ಇರತಕ್ಕಂಥದ್ದು ಫೋಟೋ ನೋಡಿದ ಮೇಲೆ ಏನು ಅಪರಾಧಿಗಳು ಇದ್ದಾರೆ . ಮಂತ್ರಿಗಳು ಅವರ ಜೊತೆಯಲ್ಲಿ ಮೆರವಣಿಗೆ ಮಾಡುತ್ತಿದ್ದಾರೆ, ಅವರಿಗೂ ಇವರಿಗೂ ಸಂಬಂಧ ಇದೆ ಎನ್ನುವುದನ್ನು ಹೇಳುವುದಕ್ಕೆ ಪ್ರಯತ್ನ ಮಾಡಿದ್ದಾರೆ. ತಾವು ನಿರ್ವಿವಾದವಾದಂಥ ರೀತಿಯಲ್ಲಿ ಸಂಬಂಧ ಇದೆ ಎನ್ನುವುದನ್ನು ಹೇಳುವಂಥದ್ದಲ್ಲ. ಆ ದೃಷ್ಟಿಯಿಂದ ನಾನೇ ಪರ್ಸನಲ್ ಆಗಿ ತೆಗೆದು ಅದನ್ನು ವೆರಿಫೈ ಮಾಡಿ ಮಾಡಿಸುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಆದ್ದರಿಂದ ವಿರೋಧ ಪಕ್ಷದ ನಾಯಕರು ಮತ್ತೆ ಮತ್ತೆ ಅದನ್ನು ಒತ್ತಾಯ ಮಾಡತಕ್ಕಂಥದ್ದು ಸರಿಯಲ್ಲ. ಆ ಒಂದು ಅವಕಾಶವನ್ನು ಮುಖ್ಯಮಂತ್ರಿಗಳಿಗೆ ಕೊಡತಕ್ಕಂಥದ್ದು ಅವಶ್ಯಕ ಆಗುತ್ತದೆ. ತದನಂತರ ಮುಂದೆ ಏನು ಬರುತ್ತದೆ, ಅದನ್ನು ನೋಡಿ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ.

Sri R.V. Deshapande : We are not satisfied with the answer of the Home Minister nor the Chief Minister. The Chief Minister is trying to shield the Home Minister.

ಇವರು ಸ್ಥಾನದಲ್ಲಿದ್ದು ರಾಜ್ಯದ ಜನತೆಗೆ ಏನು ಪ್ರೊಟೆಕ್ಷನ್ ಕೊಡಬಹುದು? ಅದರ ಬಗ್ಗೆ ಅನುಮಾನ ಇದೆ. ಹಾಗಾಗಿ ಮಾನ್ಯ ಮುಖ್ಯಮಂತ್ರಿಗಳು ಮಾರಲ್ ವ್ಯಾಲ್ಯೂನ್ ಬಗ್ಗೆ ಮಾತನಾಡುತ್ತಾರೆಯೇ ವಿನಹ ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಯಾವುದೋ ನೆವ ಇಟ್ಟುಕೊಂಡು ಹೇಳುತ್ತಾರೆ. ಆದ್ದರಿಂದ ನಮ್ಮ ಪಕ್ಷದವರು ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಜನತಾದಳದ ಸದಸ್ಯರುಗಳು ಸಭಾತ್ಯಾಗ ಮಾಡಿದರು.)

ಅಧ್ಯಕ್ಷರು : ಗೃಹಮಂತ್ರಿಗಳು ಮತ್ತು ಮುಖ್ಯಮಂತ್ರಿಗಳು ಈ ಹೇಳಿಕೆಯನ್ನು ನೀಡಿದ ನಂತರ ಈ ಚರ್ಚೆಯನ್ನು ಇಲ್ಲಿಗೆ ಮುಕ್ತಾಯಗೊಳಿಸಿ ಸದನದ ಕಲಾಪಗಳನ್ನು ಮುಂದೂಡಿ ಮತ್ತೆ 3 ಗಂಟೆಗೆ ಸೇರೋಣ.

(ಸಭೆಯು 1-55ಕ್ಕೆ ಮುಕ್ತಾಯಗೊಂಡು ಮತ್ತೆ 3-00 ಗಂಟೆಗೆ ಸೇರುವುದು.)

ಸಭೆ ಪುನಃ ಮಧ್ಯಾಹ್ನ 3.30ಕ್ಕೆ ಪ್ರಾರಂಭವಾಯಿತು ಸಭಾಧ್ಯಕ್ಷರಾದ ಶ್ರೀ ವಿ.ಎಸ್.ಕೌಜಲಗಿಯವರು ಪೀಠವನ್ನಲಂಕರಿಸಿದರು)

<u>ವಿತ್ತೀಯ ಕಾರ್ಯಕಾಲಾಪಗಳು</u>

ಅಧ್ಯಕ್ಷರು : ಈಗ 1994-95ನೇ ಸಾಲಿನ ಈ ಕೆಳಕಂಡ ಬೇಡಿಕೆಗಳನ್ನು ಮತಕ್ಕೆ ಹಾಕುವುದು.